೩. ಮಿಶ್ರ ಸಂಖ್ಯೆಗಳ ವಿವರಣವೆಂದರೆ ಒಂದು ಜಾತಿಯ ಒಂದು ಭಾಗದ ಸಂಖ್ಯೆ ತನ್ನ ಮೇಲೆ ಇದ್ದ ಮೇಲ್ಭಾಗಗಳಾಗ ಮಾಡುವದು. ಅದಕ್ಕಾಗಿ ಆ ಕೀಳ್ಭಾಗದ ಸಂಖ್ಯೆಯನ್ನು ಭಾಗಿಸಬೇಕು. ಹ್ಯಾಗಂದರೆ ಆ ಕೀಳ್ಭಾಗಗಳಲ್ಲಿ ಯೆಷ್ಟು ಅದರ ಮೇಲೆ ಇರುವ ಒಂದು ಭಾಗಕ್ಕೆ ಬೇಕೆಂದು ನೋಡಿ, ಇಷ್ಟರಿಂದ ಕೀಳ್ಭಾಗದ ಸಂಖ್ಯೆಯನ್ನು ಭಾಗಿಸ ಬೇಕು; ಏನಾದರೂ ಉಳಿದರೆ, ಅದನ್ನು ಭಾಗಿಸಿದ ಕೀಳ್ಭಾಗಗಳ ಸ್ಥಾನದಲ್ಲಿ ಬರೆದು, ಸಿಕ್ಕಿದ ಮೇಲ್ಭಾಗಗಳು ಇನ್ನೂ ಇದರ ಮೇಲೆ ಇರುವ ಒಂದು ಭಾಗದಷ್ಟು ಇದ್ದರೆ, ಅದಕ್ಕೆ ಆ ಭಾಗಗಳು ಯೆಷ್ಟು ಬೇಕೆಂದು ತಿಳಕೊಂಡು, ಇಷ್ಟರಿಂದ ಯೆರಡನೇ ವರ್ಗದ ಭಾಗಗಳನ್ನು ಭಾಗಿಸ ಬೇಕು. ಉಳಿದದ್ದು ೨ ನೇ ವರ್ಗದ ಭಾಗಗಳು, ಲಬ್ಧವು ಇದರ ಮೇಲ್ಭಾಗಗಳಾಗಿರುತ್ತದೆ. ಇವುಗಳನ್ನು ಮೂರನೇ ವರ್ಗದ ಸ್ಥಳದಲ್ಲಿ ಬರಿಯ ಬೇಕು. ಆದರೆ ಇವು ಇನ್ನೂ ಅದರ ಮೇಲೆ ಇರುವ ಒಂದು ಭಾಗದಷ್ಟು ಇದ್ದರೆ, ಮೊದಲು ಮಾಡಿದ ಹಾಗೆ ಮಾಡ ಬೇಕು.

೪. ಮಿಶ್ರಸಂಖ್ಯೆ ಸವರ್ಣನದ ಉದಾಹರಣೆ.

೩೧ ರೂಪಾಯಿ ೭ ಆಣೆ ೨ ಪೈ ಪೈಗಳಾಗ ಬೇಕು.

```
ರೂ.  ಆ.  ಪೈ.
೩೧   ೭   ೨
 ೧೬
───
೧೮೬
೩೧ ೭
───
೫೦೩  ಆ.
 ೧೨
───
೧೦೦೬
೫೦೩ ೨
───
೬೦೩೮  ಪೈ.
```

ನ್ಯಾಸಃ ಈ ಹಣದ ಸಂಖ್ಯೆಗಳಲ್ಲಿ ರೂಪೈ ಯೆಂಬ ಭಾಗ ಮೇಲ್ಭಾಗವಾಗಿದೆ; ಅದರ ಕೆಳಗೆ ಇರುವ ಭಾಗ ಅಥವ ೧ ರೂಪಾಯಿಂದ ಆಗುವ ಭಾಗ ಆಣೆ. ೧ ರೂಪಾಯಿಂದ ೧೬ ಆಣೆ ಆಗುತ್ತವೆ. ಆದದರಿಂದ ಆ ೩೧ನ್ನು ೧೬ರಿಂದ ಗುಣಿಸಿ, ಈ ಮಿಶ್ರ ರಾಶಿಯಲ್ಲಿ ಹೇಳಿದ ೭ ಆಣೆ ಅದಕ್ಕೆ ಕೂಡಿಸ ಬೇಕು. ಹೀಗೆ ೩೧ ರೂ ೭ ಆ ೫೦೩ ಆಣೆಗಳು ಆಗುತ್ತವೆ. ಆಣೆಕಿಂತ ಕೆಳಗಿನ ಭಾಗ ಪೈ. ೧ ಆಣೆಯಿಂದ ೧೨ ಪೈ ಆಗುತ್ತವೆ. ಆದಕಾರಣ ೫೦೩ ಆಣೆಗಳಿಂದ ೫೦೩ ಸಾರಿ ೧೨ ಪೈ ಆಗುತ್ತವೆ. ಆದದರಿಂದ ೫೦೩ ನ್ನು ೧೨ರಿಂದ ಗುಣಿಸಿ, ಮಿಶ್ರ ರಾಶಿಯಲ್ಲಿ ಹೇಳಿದ ೨ ಪೈ ಅದಕ್ಕೆ ಕೂಡಿಸ ಬೇಕು. ಹೀಗೆ ೩೧ ರೂ ೭ ಆ ೨ ಪೈ ೬೦೩೮ ಪೈಗಳಾಗುತ್ತವೆ.

೫. ಮಿಶ್ರ ಸಂಖ್ಯೆ ವಿವರ್ಣನದ ಉದಾಹರಣೆ.

೧೭೧೨೭ ಪೈ ರೂಪಾಯಿ ಆಗ ಬೇಕು.

```
೧೨) ೧೭೧೨೭ (೧೪೨೭
    ೧೨
    ೫೧
    ೪೮
     ೩೨
     ೨೪
      ೮೭
      ೮೪
       ೩
```

```
೧೬) ೧೪೨೭ (೮೯
    ೧೨೮
    ೧೪೭
    ೧೪೪
      ೩
```

ನ್ನು ಪೈಗಳಿಂದ ಆಗುವ ಮ್ಯೊಲ್ಭಾಗ ಆಣೆ ೧ ಆಣೆಗೆ ೧೨ ಪೈ ಬೇಕು. ಆದಕಾರಣ ೧೭೧೨೭ ರಲ್ಲಿ ೧೨ ಯೆಷ್ಟು ಸಾರಿ ಉಂಟೋ, ಅಷ್ಟು ಆಣೆ ಆಗುತ್ತವೆ. ಆದದರಿಂದ ೧೭೧೨೭ ನ್ನು ೧೨ ರಿಂದ ಭಾಗಿಸ ಬೇಕು. ಹೀಗೆ ೧೭೧೨೭ ಪೈ=೧೪೨೭ ಆಣೆ ಮತ್ತು ೩ ಪೈ. ಆಣೆಗಳಿಂದ ಆಗುವ ಮ್ಯೊಲ್ಭಾಗ ರೂಪಾಯಿ. ೧ ರೂಪಾಯಿಗೆ ೧೬ ಆಣೆ ಬೇಕು; ಆದಕಾರಣ ೧೪೨೭ ಆಣೆಗಳಲ್ಲಿ ೧೬ ಯೆಷ್ಟು ಸಾರಿ ಉಂಟೋ ಅಷ್ಟು ರೂಪಾಯಿ ಆಗುತ್ತವೆ. ಆದದರಿಂದ ೧೪೨೭ನ್ನು ೧೬ ರಿಂದ ಭಾಗಿಸ ಬೇಕು. ಹೀಗೆ ೧೪೨೭ ಆಣೆಗಳಿಂದ ೮೯ ರೂಪಾಯಿ ೩ ಆಣೆ, ಮತ್ತು ಪೈಗಳಲ್ಲಿ ಉಳಿದ ೩ ಪೈ ಆಗುತ್ತವೆ.

೭. ಸವರ್ಣನದ ಪಾಠಗಳು.

ಪ್ರಶ್ನೆ.

೧. ೩೪೫ ವರಹ. ೩ ರೂ. ೧೩ ಆ. ೯ ಪೈ. ಯೆಷ್ಟು ಪೈ.
೨. ೨೦೯ ” ೧ ” ೯ ” ೩ ” ” ”
೩. ೫೧೨೯ ವರಹ. ೨ ರೂ. ೧೪ ಆ. ೧ ಪೈ.
೪. ೬೭೦ ” ೦ ” ೮ ” ೦ ”
೫. ೦ ” ೩ ” ೧೫ ” ೧೧ ”
೬. ೭೬೨೪ ” ೧ ” ೦ ” ೦
೭. ೩೧೪೫೦ ರೂ. ೩೦ ದು. ೩ ೨/೩ ಪೈ. ಯೆಷ್ಟು ಕಾಸು.
೮. ೯೦೪೮ ” ೪೫ ” ೩ ೧/೪ ” ” ”
೯. ೪೪೪ ವ. ೧ ಹೊ. ೧ ಹ. ೧ ಅ. ೧ ಹೊ. ೧ ಬೇ. ೧ ವೀ. ೧ ಕಾ. ಯೆ ರುಪಾಯಿ.
೧೦. ೫೩೦ ” ೦ ” ೨ ” ೦ ” ೧ ” ೦ ” ೧ ” ೦ ” ”
೧೧. ೨೭ ಖಂ. ೦ ಮ. ೩ ಧ. ೧೧ ಸೇ. ೨೩ ರೂಪೈ ಕಬ್ಬಿಣ. ಯೆಷ್ಟು ರೂಪಾಯಿ ತೂಕ
೧೨. ೯೬ ” ೧೭ ” ೦ ” ೭ ” ೮ ” ” ” ” ”
೧೩. ೩೪೫೬ ಖಂ. ೧೬ ಮ. ೪೪ ಸೇ. ೨೧ ರೂ ತೂಕ ಕಾಫಿ. ಯೆಷ್ಟು ರೂಪಾಯಿ ತೂಕ
೧೪. ೭೯೮ ” ೬ ” ೧೨ ” ೧೦ ” ” ” ” ”
೧೫. ೭ ” ೧೨ ” ೩೯ ” ೧೧ ” ಬೆಳ್ಳಿ ” ” ”
೧೬. ೧೫ ” ೪ ” ೧ ” ೧೨ ” ” ” ” ”
೧೭. ೪೫ ಕಾ. ೩೦ ಮು. ೨ ಕ. ೧೨ ಸೇ. ೫೬ ರೂ ಅಕ್ಕಿ. ಯೆಷ್ಟು ರೂಪಾಯಿ ತೂಕ.
೧೮. ೨೧೦ ” ೦ ” ೧ ” ೭ ” ೪೦ ” ” ” ” ”
೧೯. ೭೦ ” ೦ ” ೧ ” ೧೩ ” ೭೭ ” ” ” ” ”
೨೦. ೭ ಖಂ. ೧೯ ಮ. ೪೭ ಸೇ. ೨ ರೂ ಗಾಧಿ. ಯೆಷ್ಟು ರೂಪಾಯಿ ತೂಕ.
೨೧. ೧೮ ” ೭ ” ೩೬ ” ೦ ” ” ” ” ” ”
೨೨. ೧ ” ೦ ” ೨೬ ” ೭ ” ” ” ” ” ”
೨೩. ೮ ಗಾ. ೧೯೧ ಮ. ೭ ಪ. ೭ ಅ. ೬ ರೂ. ಯೆಷ್ಟು ರೂಪಾಯಿ ತೂಕ.
೨೪. ೦ ” ೧೦೦ ” ೦ ” ೬ ” ೧೨ ” ” ” ” ” ”
೨೫. ೧ ” ೮೦ ” ೫ ” ೦ ” ೦ ” ” ” ” ” ”
೨೬. ೪ ಖಂ. ೯ ಮ. ೨ ಕಾ. ೩ ಕು. ೪ ಸೇ. ೧ ಕು. ೧೧ ರೂ ಯೆಂಣೆ ಯೆಷ್ಟು ರೂ ತೂಕ.
೨೭. ೦ ಖಂ. ೯ ಮ. ೦ ಕಾ. ೨ ಕು. ೨ ಸೇ. ೦ ಕು. ೮ ರೂ ಉಪ್ಪು ಯೆಷ್ಟು ರೂ ತೂಕ.
೨೮. ೨ ” ೦ ” ೦ ” ೧ ” ೩ ೧ ” ೦ ” ” ” ”

ఉత్తర.

౧. ౨౬౫౭౦౧ పై.	౧౫. ౧౪౬౮౬౭ రూ తూక.
౨. ౧౬౦౮౧౫ ,,	౧౬. ౨౯౧౮౭౬ ,, ,,
౩. ౩౯౩౯౬౨౫ ,,	౧౭ ౬౨౯౩౦౮౬ ,, ,,
౪. ౫౧౪౬౫౬ ,,	౧౮. ౨౮౮౯౫౯౯౮ ,, ,,
౫. ౭౬౭ ,,	౧౯. ౯౬౩౩౬౨౩ ,, ,,
౬. ౫౮౫౫౪౨౪ ,,	౨౦. ౧౮౪౨౯౮ ,, ,,
౭. ౧౨౦౭౭౦౪౭ కాసు.	౨౧. ౪౨౩౬౪౮ ,, ,,
౮. ౩౪౭౪౭౯౮ $\frac{౧}{౨}$,,	౨౨. ౨౩౬౭౧ ,, ,,
౯. ౧౭౭౮ రూ ౩౯ దు $\frac{౧}{౪}$ పై.	౨౩. ౧౭౨౦౩౧౧ ,, ,,
౧౦. ౨౧౨౦ ,, ౪౬ ,, ౧ ,,	౨౪. ౯౬౧౦౨ ,, ,,
౧౧. ౬౨౩౨౩౧ రూ తూక.	౨౫. ౨౬౯౪౦౦ ,, ,,
౧౨. ౨౨౩౧౬౦౦ ,, ,,	౨౬. ౫౬౨౩౧ ,, ,,
౧౩. ౭౭౪౩౩౯౭ ,, ,,	౨౭. ౧౦౧౩౬ ,, ,,
౧౪. ౧౭౮౨౨౧౮ ,, ,,	౨౮. ౨౨౯౩౨ ,, ,,

౨౯. ఒందు ఖండి కట్టిగెగె యెష్టు అంగుల ఉంటు. ఉత్తర: ౬౯౧౨ అంగుల.

౩౦. ఒందు మర ౨౨ క్యాలు ౮ అంగుల ౮ వీస ఉద్ద, ౧ అంగుల అగల, ౭ అంగుల దప్ప ఉంటు; అదు ఖండియ యెష్టనె పాలు. ఉత్తర: $\frac{౭౫౧౧}{౧౩౮౨౪}$ నె ఖండి=౧౩ క్యాలు ౧౧ $\frac{౧}{౨}$ అంగుల.

౩౧. ౧ క్యాడి మరక్కె యెష్టు అంగుల ఉంటు. ఉత్తర: ౧౩౮౨౪౦ అంగుల.

౩౨. ఒందు మర ౧౨ క్యాలు ఉద్ద ౧౦ అంగు

೮ ಅಗಲ ೯ ಅಂಗುಲ ದಪ್ಪ ಉಂಟು. ಅದು ಕ್ಯಾಡಿಯ ಯೆಷ್ಟನೇ ಪಾಲು. ಉತ್ತರ: $\frac{೨೫೯೨}{೧೩೮೨೪}$ ನೇ ಭಾಗ ಕ್ಯಾಡಿ ಅಥವ ೪೫ ಕ್ಯಾಲು.

೩೩. ಗಗಾಸಿನವರ ಕ್ಯಾಡಿಗೆ ಯೆಷ್ಟು ಅಂಗುಲ ಉಂಟು. ಉತ್ತರ: ೬೯೧೨೦ ಅಂಗುಲ.

೩೪. ೧೫ ಕ್ಯಾಲು ಉದ್ದ ೮ ಅಂಗುಲ ಅಗಲವಾದ ಮರಕ್ಕೆ ೪ ನೂಲುಗಳಂನು ಯೆಳದರೆ ಯೆಷ್ಟು ಅಂಗುಲ ಗಗಾಸ ಮಾಡಿದರು. ಉತ್ತರ: ೭೨೦ ಅಂಗುಲ.

೩೫. ೩ ಮೈ. ೭ ಫರ್ಲಾ. ೩೬ ಪೋ. ೨ ಫಾ. ೧ಯಾ. ೨ ಫೀ ೧೦ ಇಂಚ್ ಯೆಲ್ಲಾ ಇಂಚ್‌ಗಳಾಗ ಬೇಕು. ಉತ್ತರ: ೨೫೨೮೬೨ ಇಂಚ್.

೩೬. ೩೯೧೬ ಮೈಲುಗಳು ಯೆಷ್ಟು ಯಾರ್ಡ್ ಆಗುತ್ತದೆ. ಉತ್ತರ: ೬೮೯೨೧೬೦ ಯಾರ್ಡ್.

೩೭. ವಾಂದು ಫಾರ್ಲಾಂಗ್ ಯೆಷ್ಟು ಯಾರ್ಡ್ ಆಗುತ್ತದೆ. ಉತ್ತರ: ೨೨೦ಯಾರ್ಡ್.

೩೮. ವಾಂದು ಪೋಲ್ ಯೆಷ್ಟು ಯಾರ್ಡ್ ಆಗುತ್ತದೆ. ಉತ್ತರ: ೫ $\frac{೧}{೨}$ ಯಾರ್ಡ್.

೩೯. ವಾಂದು ಮೈಲಿಗೆ ಯೆಷ್ಟು ಫೀಟ್ ಉಂಟು. ಉತ್ತರ: ೫೨೮೦ ಫೀಟ್.

೪೦. ೯೬೬೮ ಯಾರ್ಡ್ಸ್ ಇಂಚ್ ಆಗ ಬೇಕು. ಉತ್ತರ: ೩೪೮೦೪೮ ಇಂಚ್.

೪೧. ಒಂದು ಚೌಕ ಮೈಲ್ ಯೆಷ್ಟು ಚೌಕ ಫೀಟ್ ಆಗುತ್ತದೆ. ಉತ್ತರ: ೨೭೮೭೮೪೦೦ ಚೌಕ ಫೀಟ್.

೪೨. ಒಂದು ಗುಂಟೆಗೆ ಯೆಷ್ಟು ಇಂಚ್. ಉತ್ತರ: ೧೫೬೮೧೬ ಇಂಚ್.

೪೩. ೭೩೨ ಚೌಕ ಮೈಲ್ ಯೆಷ್ಟು ಚೌಕ ಫೀಟ್ ಆಗುತ್ತವೆ. ಉತ್ತರ: ೨೦೪೦೬೯೮೮೮೦೦ ಫೀಟ್

೪೪. ಒಂದು ಚೌಕ ಯಾರ್ಡಿಗೆ ಯೆಷ್ಟು ಚೌಕ ಇಂಚ್. ಉತ್ತರ: ೧೨೯೬ ಇಂಚ್.

೪೫. ವರುಷಕ್ಕೆ ಯೆಷ್ಟು ಸೆಕುಂಡಗಳು. ಉತ್ತರ: ೨೯೦೩೦೪೦೦ ಸೆಕುಂಡ.

೪೬. ಒಂದು ತಿಂಗಳಿಗೆ ಯೆಷ್ಟು ತಾಸುಗಳು. ಉತ್ತರ: ೬೭೨ ತಾಸು.

೪೭. ಒಂದು ದಿವಸಕ್ಕೆ ಯೆಷ್ಟು ಮಿನೀಟಗಳು. ಉತ್ತರ: ೧೪೪೦ ಮಿನೀಟ.

೪೮. ೧೮೫೫ ವರುಷಕೆ ಯೆಷ್ಟು ಸೆಕುಂಡಗಳು ಆಗುತ್ತವೆ. ಉತ್ತರ: ೫೩೮೫೧೩೯೨೦೦೦ ಸೆಕುಂಡ.

೭. ವಿಮರ್ಗನದ ಪಾಠಗಳು.

ಪ್ರಶ್ನೆ.

೧. ೨೩೪೫೬೭೮ ಪೈ, ಯೆಷ್ಟು ವರಹಗಳಾಗುತ್ತವೆ.
೨. ೭೧೨೫ ಪಾವಲಿ, " "
೩. ೬೨೮೪ ದುಡ್ಡು, ಯೆಷ್ಟು ರೂಪಾಯಿಗಳಾಗುತ್ತವೆ.
೪. ೨೬೯೮೭ ದುಗಾಣಿ, " "
೫. ೬೬೬೬೬೬ ಕಾಸು, " "
೬. ೬೫೪೩೨೧ ವರಹ ತಾಂಬ್ರ, ಯೆಷ್ಟು ಖಂಡಿಗಳಾಗುತ್ತವೆ.
೭. ೫೯೬೮೦ ಸೇರು ಕಬ್ಬಿಣ, " "
೮. ೭೮೯೦ ಮಣ ಹಿತ್ತಾಳಿ, " "
೯. ೯೪೦೭೬೭ ರೂಪಾಯಿತೂಕ ಕಾಪಿ, ಯೆಷ್ಟು ಮಣಗಳಾಗುತ್ತವೆ.
೧೦. ೭೬೫೯೦ ಸೇರು ಮೆಣಸು, ಯೆಷ್ಟು ಖಂಡಿಗಳಾಗುತ್ತವೆ.
೧೧. ೪೪೪೪೪೪೪ ರೂಪಾಯಿತೂಕ ಬೆಲ್ಲ, ಯೆಷ್ಟು "
೧೨. ೯೬೫೮೯೬ ರೂಪಾಯಿತೂಕ ಅಕ್ಕಿ ಯೆಷ್ಟು ಕೋಜೀಗಳಾಗುತ್ತವೆ.
೧೩. ೭೮೯೦ ಕಳಸೆ " " "
೧೪. ೬೦೦೦೦ ಮುಡಿ " " "
೧೫. ೯೦೬೭೮೯ ಸೇರು, " " "
೧೬. ೪೪೫೫೬೬ ರೂಪಾಯಿತೂಕ ಉಪ್ಪು, ಯೆಷ್ಟು ಗಾರಸುಗಳಾಗುತ್ತವೆ.
೧೭. ೧೬೫೮೬೦ " " " "
೧೮. ೧೦೮೯೧೫ ಸೇರು ಯೆಂಣೆ, ಯೆಷ್ಟು ಖಂಡಿಗಳಾಗುತ್ತವೆ.
೧೯. ೧೭೮೩೧ ಕುತ್ರಿ " " "
೨೦. ೭೦೮೬೫ ಅಂಗುಲ ಕಟ್ಟಿಗೆ, ಯೆಷ್ಟು ಖಂಡಿ ಆಗುತ್ತದೆ.
೨೧. ೬೫೭೬೦ ಅಂಗುಲ ಮರ, ಯೆಷ್ಟು ಕೋಡಿ ಆಗುತ್ತದೆ, ಮತ್ತು ಗಗೋಸ ಮಾಡಲಿಕ್ಕೆ ಯೆಷ್ಟು ಕೋಡಿ ಆಗುತ್ತದೆ.
೨೨. ೬೩೯೨೬ ಇಂಚ್, ಯೆಷ್ಟು ಮೈಲುಗಳಾಗುತ್ತವೆ.
೨೩. ೧೦೦೦೦೦ ಯಾರ್ಡ್ಸ್, " "

ಉತ್ತರ.

೧. ೩೦೫೪ ವರಹ ೧ ರೂಪಾಯಿ ೧ ಅ ೨ ಪೈ.
೨. ೪೪೫ ವರಹ ೧ ರೂಪಾಯಿ ೪ ಅ.
೩. ೧೩೦ ರೂಪಾಯಿ ೪೪ ದುಡ್ಡು.
೪. ೨೮೧ ರೂಪಾಯಿ ೫ ದುಡ್ಡು ೨ ರುಪ್ಪಿ.
೫. ೧೭೩೬ ರೂಪಾಯಿ ೫ ದುಡ್ಡು ೧ ರುಪ್ಪಿ.

೬. ೮ ಖಂಡಿ ೧೦ ಮಣ ೧ ಧಡೆ ೧ ಪಂಚಸೇರು ೧ ಸೇರು ೧ ವರಹಾ.

೭. ೬೨ ,, ೧೩ ,, ೧ ,, ೦ ೪ ,,

೮. ೩೯೪ ,, ೧೦ ,,

೯. ೮೩೯ ಮಣ ೧೩೪ ಸೇರು ೧೫ ರೂಪಾಯಿ ಕಾಫಿ.

೧೦. ೮೨ ಖಂಡಿ ೧ ಮಣ ೩೦ ಸೇರು ಕಾಫಿ.

೧೧. ೨೩ ,, ೨ ,, ೩೮ ,, ೧೨ ರೂಪಾಯಿ ಬೆಲ್ಲ.

೧೨. ೭ ಕೋಜಿ ೨ ಕಳಸೆ ೭ ಸೇರು ೨೨ ರೂಪಾಯಿ ತೂಕ.

೧೩. ೬೨ ,, ೨೬ ಮುಡಿ.

೧೪. ೧೪೨೮ ಕೋಜಿ ೨೪ ಮುಡಿ.

೧೫. ೫೧೪ ,, ೨ ,, ೯ ಸೇರು.

೧೬. ೨ ಗಾರಸು ೬೪ ಮರಕಾಲು ೧ ಪಡಿ ೬ ರೂಪಾಯಿ ತೂಕ.

೧೭. ೧೭೨ ಮರಕಾಲು ೬ ಪಡಿ ೧ ಅಳಕ ೫ ಸೇರು.

೧೮. ೨೩೩ ಖಂಡಿ ೩ ಮಣ ೧ ೧/೨ ಕಾಲಾಡ ೨ ಕುತ್ತಿ ೧೩ ಸೇರು.

೧೯. ೧೭೮ ,, ೨ ,, ೨ ಕಾಲಾಡ ೩ ಕುತ್ತಿ.

೨೦. ೧೦ ಖಂಡಿ ೬ ಕೋಲು ೧೭ ಅಂಗುಲ.

೨೧. ೧೧೪ ಕೋಲು ೯೬ ಅಂಗುಲ ಮರ, ಮತ್ತು ಗಗೋಸದವರ ಕೋಲು ೨೨೮ ಅಂಗುಲ ೯೬.

೨೨. ೧ ಮೈಲ್ ೧ ಫರ್ಲೋಂಗ್ ೧೩ ಪೋಲ್ ೧/೪ ಫಟಾಮ್ ೧ ಯಾರ್ಡ್ ೧ ಫೂಟ್ ೬ ಇಂಚ್

೨೩. ೫೬ ,, ೬ ,, ೨೧ ,, ೨ ೧/೪ ,,

೭ನೆ ಸಂಧಿ.

ಮಿಶ್ರ ಸಂಖ್ಯೆಗಳ ಸಂಕಲಿತ.

ಸೂತ್ರ:

೧. ವೊಂದೊಂದು ಭಾಗದ ಸಂಖ್ಯೆಗಳಂನು ಅಂಕೆಗಳ ಬೆಲೆಯ ಪ್ರಕಾರ ವೊಂದೊಂದರ ಕೆಳಗೆ ಬರೆದು, ಯೆಲ್ಲಾದರ ಕೆಳಗೆ ಅಡ್ಡ ಗೆರೆ ಮಾಡು.

೨. ಬಲಪಾರ್ಶ್ವದಲ್ಲಿ ನಿಲ್ಲುವ ಕೀಳ್ಭಾಗಗಳಂನು ಮೊದಲು ಕೂಡಿಸಿ, ವಾಟ್ಟಂನು ಆಗುವಷ್ಟು ಮೇಲ್ಭಾಗಗಳಂನು ಮಾಡಿ, ಉಳಿದದ್ದಂನು ಕೂಡಿಸಿದ ಭಾಗಗಳ ಕೆಳಗೆ ಬರಿಯ ಬೇಕು.

೩. ಆಮೇಲೆ ಯೆರಡನೇ ಸಾಲಿನಲ್ಲಿ ನಿಲ್ಲುವ ಭಾಗಗಳಂನು ಕೂಡಿಸ ಬೇಕು. ಅದಕ್ಕೆ ಕೀಳ್ಭಾಗದ ವಾಟ್ಟಿನಿಂದ ಶಿಕ್ಕಿದ ಭಾಗಗಳಂನು ಕೂಡಿಸಿ, ಇದರ ವಾಟ್ಟಿನಿಂದ ತಿರಿಗಿ ಆಗುವಷ್ಟು ಇದರ ಮೇಲ್ಭಾಗಗಳಂನು ಮಾಡಿ, ಉಳಿದದ್ದಂನು ಕೂಡಿಸಿದ ಭಾಗಗಳ ಕೆಳಗೆ ಬರೆಯ ಬೇಕು.

೪. ಅದೇ ಪ್ರಕಾರ ಯೆಲ್ಲಾ ಸಾಲುಗಳಂನು ಕೂಡಿಸ ಬೇಕು.

೫. ಲೆಖ್ಖ ಸಮವಾಯಿತಾ ಇಲ್ಲವಾ ಯೆಂದು ನೋಡುವ ರೀತಿ ೨ನೆ ಸಂಧಿ ೪ನೇ ನಂಬ್ರ, ಶುದ್ಧ ಸಂಖ್ಯೆಗಳ ಸಂಕಲಿತದಲ್ಲಿ ತೋರಿಸಿದ ಹಾಗೆಯೇ ಉಂಟು.

ಉದಾಹರಣೆ.

೩೧ ರೂ. ೭ ಆ. ೨ ಪೈ, ೩೦೭ ರೂ. ೬ ಆ. ೯ ಪೈ, ೨೯ ರೂ. ೧೪ ಆ. ೪ ಪೈ, ೭೮ ರೂ. ೧ ಆ. ೧೧ ಪೈ, ೬೯೧ ರೂ. ೧೩ ಆ. ೧೦ ಪೈ, ಮತ್ತು ೧೨ ರೂ. ೫೧ ಆ. ೯ ಪೈ ಕೂಡಿಸ ಬೇಕು.

ರೂ.	ಆ.	ಪೈ.
೩೧	೭	೨
೩೦೭	೬	೯
೨೯	೧೪	೪
೭೮	೧	೧೧
೬೯೧	೧೩	೧೦
೧೨	೧೫	೯
೧೧೫೧	೧೧	೯

ನ್ಯಾಸ: ಇಲ್ಲಿ ಹೋದ ಭಾಗಗಳಂನು ಕೂಡಿಸ ಬೇಕು. ಪೈ ಕೀಳ್ಭಾಗವಾಗಿದೆ. ಆದಕಾರಣ ಮೊದಲು ಬಲಗಡೆಯಲ್ಲಿ ಇರುವ ಪೈಗಳ ಸಾಲಂನು ಕೂಡಿಸ ಬೇಕು. ಪೈಗಳ ಮೊತ್ತು ೪೫. ಪೈಗಳ ಮೇಲಿನ ಭಾಗ ಆಣೆ.

೧ ಆಣೆಗೆ ೧೨ ಪೈ; ಆದಕಾರಣ ಆ೪೫ ಪೈ ಆಣೆ ಮಾಡ ಬೇಕು. ಇವು ೩ ಸಾರಿ ೧೨ ಪೈ ಅಥವ ೩ ಆಣೆ ಆಗಿ, ೯ ಪೈ ಉಳಿಯುತ್ತವೆ. ಇದಂನು ಪೈಗಳ ಸಾಲಿನ ಕೆಳಗೆ ಬರೆದು, ಕೈಯಲ್ಲಿ ಇದ್ದ ೩ ಆ ಮತ್ತು ಬಲಗಡೆಯಿಂದ ೨ನೇ ಸಾಲಿನಲ್ಲಿ ಬರೆದ ಆಣೆಗಳಂನು ಕೂಡಿಸ ಬೇಕು. ಇವುಗಳ ಮೊತ್ತು ೫೯. ಆಣೆಗಳ ಮೇಲ್ಭಾಗವು ರೂಪ್ಯಾ; ೧ ರೂಪಾಯಿಗೆ ೧೬ ಆಣೆ. ಹೀಗಿರಲಾಗಿ ೫೯ ಆಣೆ ೩ ಸಾರಿ ೧೬ ಆಣೆ ಅಥವ ೩ ರೂಪಾಯಿ ಆಗಿ, ೧೧ ಆಣೆ ಉಳಿಯುತ್ತವೆ. ಇವುಗಳಂನು ಆಣೆಗಳ ಸಾಲಿನ ಕೆಳಗೆ ಬರೆದು, ಕೈಯಲ್ಲಿ ಇದ್ದ ೩ ರೂ. ಮತ್ತು ಬಲಗಡೆಯಿಂದ ೩ನೇ ಸಾಲಿನಲ್ಲಿ ಬರೆದ ರೂಪ್ಯಾಗಳಂನು ಕೂಡಿಸ ಬೇಕು.

ಇವುಗಳ ಮೊಟ್ಟು ೧೧೫೧. ಹೀಗೆ ಈ ಪೂರಾದ ಮೊಟ್ಟು ೧೧೫೧ ರೂ ೧೧ ಅ ೮ ಪೈ ಆಗಿದೆ.

ಪಾಠಗಳು.

೧.

ರೂ.	ಅ.	ಪೈ.
೩೬	೯	೭
೧೨೪	೧೪	೧೧
೨೧೬	೧೦	೩
೯೯	೦	೫
೭೫೬	೨	೦
೪೪	೧೨	೬
೧೩೫	೧೫	೭
೧೪೧೪	೧	೩

೨.

ರೂ.	ಅ.	ಪೈ.
೭೭	೧೪	೩
೨೧	೯	೧೦
೪೯	೬	೪
೫೭	೩	೫
೧೨೪	೫	೮
೨೧೮	೭	೯
೩೪೭	೧೦	೬
೮೯೬	೯	೯

೩.

ರೂ.	ಅ.	ಪೈ.
೭೨೭	೧೩	೪
೯೬೫	೧೪	೨
೮೩೭	೧೫	೧೧
೫೮೬	೧೦	೯
೩೯೮	೯	೬
೬೧೩	೧೨	೧೧
೩೯೫	೯	೭
೫೯೩	೧೨	೪
೬೭೫	೧೦	೧೧
೫೭೬೫	೧೩	೫

೪.

ವರುಷ	ತಿಂಗಳು	ದಿವಸ
೧೬	೧೦	೧೨
೧೨	೧೦	೬
೧೫	೯	೧೪
೭೪	೪	೫
೬೮	೮	೫
೨೬	೬	೨೮
೨೧೫	೧	೧೦

೫.

ತಿಂಗಳು.	ದಿವಸ.	ತಾಸು.	ನಿಮಿಷ.
೭	೧೮	೧೪	೫೦
೮	೨೨	೦	೪೮
೭	೨೪	೨೦	೪೬
೧೦	೨೫	೧೧	೩೫
೬	೦	೧೭	೧೬
೪	೨೯	೨೦	೧೨
೪೬	೧	೧೩	೨೭

೬.

ತಾಸು.	ನಿಮಿಷ.	ಸೆಕುಂಡ.
೧೮	೨೪	೨೮
೨೨	೪೬	೧೭
೧೩	೫೧	೨೨
೨೦	೩೯	೩೯
೧೫	೪೨	೫೮
೧೮	೧೮	೨೫
೧೧೯	೪೩	೯

೭.

ಯೆಕರ್.	ಗುಂಟೆ.	ಆಣೆ.
೭೩	೩೯	೩
೭೨	೧೭	೧
೯೩	೨೬	೨
೩೭	೧೫	೧
೨೫	೭	೨
೮೭	೧೯	೩
೭೬	೩೫	೩
೪೬೬	೭೮	೧೫

೮.

ಮೈ.	ಫರ್ಲಾಂ.	ಯಾ.	ಫೀ.	ಇಂ.
೭	೨	೧೯೭	೨	೧೧
೬೩	೬	೨೧೩	೧	೪
೨೭	೨	೩೯	೦	೧೦
೩೮	೭	೨೧೯	೧	೯
೪೭	೩	೭೬	೨	೩
೫೧	೫	೨೩	೧	೭
೩೯	೧	೧೨೭	೨	೫
೨೭೫	೬	೧೮	೧	೧

೯.

ಖಂ.	ಮಣ.	ಧಡೆ.	ಸೇ.	ವರಹಾ ಕಬ್ಬಿಣ.
೧೨	೧೬	೩	೧೦	೨೩
೧	೧೯	೨	೧೧	೧೬
೩	೭	೧	೮	೨೦
೫	೧೯	೩	೧೧	೨೩
೧೯	೧	೦	೪	೬
೪೩	೫	೦	೯	೮

೧೦.

ಖಂ.	ಮಣ.	ಸೇ.	ವರಹಾ ಹಿತ್ತಾಳಿ.
೮	೫	೨೮	೧
೨೩	೧೩	೩೬	೨೧
೦	೦	೪೭	೦
೧೦	೧೫	೩೩	೦
೧೭	೧೨	೧೫	೨
೬೦	೮	೧೫	೨೪

೧೧.

ಖಂ.	ಮ.	ಸೇ.	ರೂ. ಕಾಫಿ.
೧೫೭೪	೧೯	೪೬	೧೫
೨೩೧೪	೧೮	೩೯	೨೩
೮೧೬	೧೫	೪೪	೦
೯೯೯	೧೭	೧೬	೧೦
೫೬೭೮	೬	೨೭	೦
೧೧೩೮೪	೧೮	೩೪	೦

೧೨.

ಖಂ.	ಮ.	ಸೇ. ಮೆಣಸು.
೧೫೦	೪	೩೫
೩೩೩	೧೫	೨೦
೨೪	೭	೩೭
೨೦೧	೦	೩೬
೦	೨	೦
೭೦೯	೧೦	೩೪ ೨/೩

೧೩.

ಖಂ.	ಮ.	ಸೇ.	ರೂ. ಬೆಲ್ಲ.
೧೯	೦	೩೯	೨೩
೧	೧೮	೩೮	೨೨
೦	೧	೧	೩
೨೧	೧	೦	೦

೧೪.

ಕಾರ್ಜಿ.	ಮು.	ಕ.	ಸೇ.	ರೂ. ಅಕ್ಕಿ.
೫	೪೦	೨	೧೨	೭೩
೬	೧	೦	೧	೪
೮	೨೪	೧	೭	೦
೧೦	೨೩	೧	೭	೦
೩೧	೬	೦	೦	೩

೧೫.

ಕಾ।ಜಿ.	ಮು.	ಕ.	ಸೀ. ಅಕ್ಕಿ.
೫೬	೮	೨	೪
೧೧೦	೩೦	೦	೮
೭೮	೩	೦	೨
೨೪೫	೦	೦	೦

೧೬.

ಕಾ।ಜಿ.	ಮು.	ಕ.	ಸೀ. ಅಕ್ಕಿ.
೧	೦	೧	೫
೫೦	೧೨	೧	೬
೪	೨೯	೦	೩
೫೬	೦	೦	೦

೧೭. ಹಾಬ್ಬ ಮನುಷ್ಯನು ೧೭೪೧ ನೆ ಇಸವಿ ಮಾರ್ಚ್ ೧೩ ನೇ ತಾರೀಕಿನಲ್ಲಿ ಹುಟ್ಟಿ, ೪೮ ವರುಷ ೧೧ ತಿಂಗಳು ೭ ದಿವಸ ಬದುಕಿದನು; ಅವನು ಯಾವಾಗ ಸತ್ತನು. ಉತ್ತರ: ೧೭೯೦ ಇಸವಿ, ಫೆಬ್ರುವರಿ ೨೦ ನೆ ತಾರೀಕು.

೧೮. ಹಾಬ್ಬನು ೧೭೧೫ ಇಸವಿ ಜೂಲೈ ೪ ನೇ ತಾರೀಕಿನಲ್ಲಿ ಹುಟ್ಟಿ, ೫೪ ವರುಷ ೫ ತಿಂಗಳು ೯ ದಿವಸಗಳ ಪ್ರಾಯವನ್ನು ಹೊಂದಿದನು; ಅವನು ಯಾವಾಗ ಸತ್ತನು. ಉತ್ತರ: ೧೭೬೮ ಇಸವಿ ದಶಂಬ್ರ ೧೩ ತಾರೀಕು.

೧೯. ನವೆಂಬರ್ ೧೧ನೇ ತಾರೀಕು ಬೆಳಗಾದ ೨ ಘಂಟೆ ೩೭ ಮಿನೀಟ ಆಗುವಾಗ ಪೂರ್ಣಿಮೆ ಆಯಿತು; ತರುವಾಯ ಪೂರ್ಣಿಮೆ ಆಗುವ ಪರಿಯಂತರ ೨೯ ದಿವಸ ೧೨ ತಾಸುಗಳು ೪೪ ಮಿನೀಟಗಳು ೩ ಸೆಕುಂಡಗಳು ಬೇಕು. ಹೀಗಿರುವಾಗ ತಿರಿಗಿ ಯಾವ ತಿಂಗಳು ಯಾವ ದಿವಸ ಯಾವ ಹೊತ್ತಿನಲ್ಲಿ ಹುಣ್ಣಿಮೆ ಆಗುತ್ತದೆ. ಉತ್ತರ: ದಶಂಬ್ರ ೧೦ ತಾರೀಕು ಮಧ್ಯಾನ ೩ ತಾಸು ೨೦ ಮಿನೀಟ ೩ ಸೆಕುಂಡ.

೨೦. ಒಬ್ಬ ಚಾಕ್ರಿಯವನು ಪೇಟೆಗೆ ಹೋಗಿ, ಮಾಂಸ ೧ ರೂಪಾಯಿ ೬ ಆಣೆ ೩ ಪೈ, ಸಕ್ಕರೆ ೫ ರೂ. ೩ ಆ. ೭ ಪೈ, ಚಾ ೮ ರೂ. ೧೫ ಆ. ೭ ಪೈ, ರೊಟ್ಟಿ ೩ ಆ. ೨ ಪೈ, ಬೇರೆ ಚುಂಗಡಿ ಸಾಮಾನಗಳಿಗೆ ೧೦ ರೂ. ೮ ಆ. ೧೧ ಪೈ ಖರ್ಚು ಮಾಡಿದನು. ಒಟ್ಟಿಗೆ ಯೆಷ್ಟು ಹಣ ಖರ್ಚು ಆಯಿತು. ಉತ್ತರ: ೨೬ ರೂ. ೫ ಆ. ೮ ಪೈ.

೨೧. ಒಂದು ಭೂಮಿಯಲ್ಲಿ ೧೦ ಹೊಲ ಇರುತ್ತವೆ. ಮೊದಲಿನದು ೬ ಯೇಕರ್ ೨೩ ಗುಂಟೆ ೧೦ ಆಣೆ, ಯೆರಡನೇದು ೧೦ ಯೇಕರ್ ೩೭ ಗುಂಟೆ ೧೨ ಆಣೆ, ಮೂರನೆ ೫ ಯೇಕರ್ ೩ ಗುಂಟೆ ೧೧ ಆಣೆ, ನಾಲ್ಕನೆ ೧ ಯೇಕರ್ ೧೬ ಗುಂಟೆ ೧ ಆಣೆ, ಐದನೆ ೧೧ ಯೇಕರ್ ೩ ಗುಂಟೆ ೬ ಆಣೆ, ಆರನೆ ೧೫ ಯೇಕರ್ ೨೦ ಗುಂಟೆ ೧೩ ಆಣೆ, ಯೇಳನೆ ೭ ಯೇಕರ್ ೨೫ ಗುಂಟೆ ೩ ಆಣೆ, ಯೆಂಟನೇ ೩ ಯೇಕರ್ ೧೨ ಗುಂಟೆ ೧೦ ಆಣೆ, ಒಂಭತ್ತನೇ ೧೩ ಯೇಕರ್ ೨೬ ಗುಂಟೆ ೬ ಆಣೆ, ಹತ್ತನೆ ೪ ಯೇಕರ್ ೧೭ ಗುಂಟೆ ೨ ಆಣೆ ಆಗಿದೆ. ಆ ಭೂಮಿ ಯೆಷ್ಟು ದೊಡ್ಡದು. ಉತ್ತರ: ೮೨ ಯೇಕರ್ ೩೨ ಗುಂಟೆ ೧೧ ಆಣೆ.

೨೨. ಒಬ್ಬನು ಒಂದು ಮನೆಯನ್ನು ಕಟ್ಟಿದನು; ಅದರ

ಸ್ಥಳಕ್ಕೆ ೩೬೦ ರೂಪಾಯಿ, ಕಲ್ಲುಮ್ಯೇಸ್ತ್ರಿಗೆ ೩೭೮ ರೂ. ೧೨ ಆ. ೧೧ ಪೈ, ಬಡಿಗೆಯವನಿಗೆ ೪೩೮ ರೂ. ೧೦ ಆಣೆ ೬ ಪೈ, ಹಂಚುಗಳಿಗೆ ೭೬ ರೂ. ೪ ಆ. ೮ ಪೈ, ಬ್ಯೇರೆ ಕೆಲಸದ ಕೂಲಿಗೆ ೧೫೫ ರೂ. ೧೪ ಆ. ೩ ಪೈ, ಕನ್ನಡಿಗೆ ೫೬ ರೂ. ೧೪ ಆ. ೨ ಪೈ ಕೊಟ್ಟನು. ೧೦೨ ರೂಪಾಯಿ ಲಾಭ ಮಾಡಿ, ಅದನ್ನು ತಿರಿಗಿ ಮಾರ ಮನಸ್ಸಿದ್ದರೆ, ಆ ಮನೆಯ ಕ್ರಯವೆಷ್ಟು ಆಧ್ಯೀತು. ಉತ್ತರ: ೧೫೭೦ ರೂ. ೯ ಆ. ೭ ಪೈ.

(೧೭ ನ್ಯೇ ಪಾಠ ಮಾಡುವ ರ್ಯೀತಿ ಹ್ಯಾಗಂದರೆ: ಹುಟ್ಟಿದ ಸಮಯದಲ್ಲಿ ಯೆಷ್ಟು ವರುಷ ತಿಂಗಳು ದಿವಸಗಳು ಪೂರ್ಣವಾಗಿ ಕಳದು ಹ್ಯೋದವೆಂದು ನಿಶ್ಚೈಸಿ, ಪ್ರಾಯದ ವರುಷ ತಿಂಗಳು ದಿವಸಗಳನ್ನು ಅದಕ್ಕೆ ಕೂಡಿಸ ಬ್ಯೇಕು. ವೊಬ್ಬನು ೧೭೪೧ ನ್ಯೇ ಇಸವಿಯಲ್ಲಿ ಹುಟ್ಟಿದರೆ, ೧೭೪೦ ವರುಷಗಳು ಕಳದವು; ಮತ್ತು ೧೭೪೧ ನ್ಯೇ ಇಸವಿಯಲ್ಲಿ ಜನವರಿ ಫೆಬ್ರುವರಿ, ಈ ೨ ತಿಂಗಳುಗಳು, ಮತ್ತು ಮಾರ್ಚ್ ೧೩ ನೆ ತಾರೀಕಿನಲ್ಲಿ ೧೨ ದಿವಸಗಳು ಕಳದವು. ಹ್ಯೀಗೆ ೧೭೪೦ ವರುಷ ೨ ತಿಂಗಳು ೧೨ ದಿವಸಕ್ಕೆ ೪೯ ವರುಷ ೧೧ ತಿಂಗಳು ೭ ದಿವಸ ಕೂಡಿಸ ಬ್ಯೇಕು.)

೮ನೆ ಸಂಧಿ.

ಮಿಶ್ರಸಂಖ್ಯೆಗಳ ವ್ಯವಕಲಿತ.

೧. ಒಂದೊಂದು ಭಾಗದ ಸಂಖ್ಯೆಯನ್ನು ತನ್ನ ತನ್ನ ಹೆಸರು ಇದ್ದ ಸಂಖ್ಯೆಯ ಕೆಳಗೆ ಬರೆದು, ಗೆರೆ ಹಾಕ ಬೇಕು.

೨. ಬಲಪಾರ್ಶ್ವದಲ್ಲಿ ಬರೆದ ಕೀಲ್ಭಾಗಗಳಲ್ಲಿ ಆರಂಭ ಮಾಡಿ, ಕೆಳಗಿನ ಸಂಖ್ಯೆ ಮೇಲಿನ ಸಂಖ್ಯೆಯಿಂದ ಕಳೆದು, ಶೇಷವಂನು ಗೆರೆಯ ಕೆಳಗೆ ತಂನ ಬೆಲೆಯ ಸ್ಥಳದಲ್ಲಿ ಬರೆಯ ಬೇಕು. ಹೀಗೆ ಒಂದೊಂದು ಭಾಗದ ಸಂಖ್ಯೆಗಳಿಗೆ ಮಾಡ ತಕ್ಕದ್ದು.

೩. ಮೇಲ್‌ಸಾಲಿನಲ್ಲಿ ಬರೆದ ಒಂದು ಭಾಗದ ಸಂಖ್ಯೆ ಕೆಳಗಿನ ಸಂಖ್ಯೆಯಿಂದ ಸಂಣದಾದರೆ, ಅದರ ಮೇಲ್ಭಾಗದ ಸಂಖ್ಯೆಯಿಂದ ಒಂದಂನು ತೆಗದು, ಅದರಿಂದ ಅದರ ಕೀಲ್ಭಾಗಗಳನ್ನು ಮಾಡಿ, ಕಡಿಮೆ ಇದ್ದ ಸಂಖ್ಯೆಗೆ ಕೂಡಿಸಿ, ಕೆಳಗಿನ ಸಂಖ್ಯೆ ಅದರಿಂದ ಕಳೆಯ ಬೇಕು. ಮತ್ತು ಈ ಕೀಲ್ಭಾಗಗಳ ಮೇಲೆ ಇರುವ ಮೇಲ್‌ಭಾಗಗಳಂನು ಕಳೆಯಲಿಕ್ಕೆ ಬರುವಾಗ, ಇವುಗಳಿಂದ ೧ ಹೋಯಿತೆಂದು ನೆನಪು ಮಾಡ ಬೇಕು.

೪. ಲೆಖ್ಖ ಸಮವಾಯಿತೋ ಯೆಂದು ನೋಡುವ ರೀತಿ ಶುದ್ಧ ಸಂಖ್ಯೆಗಳ ವ್ಯವಕಲಿತದಲ್ಲಿ ತೋರಿಸಿದ ಹಾಗೆ ಉಂಟು.

ಉದಾಹರಣೆ.

	ರೂ.	ಆ.	ಪೈ.
	೧೮೩೦	೫	೯
	೭೯೧	೧೫	೭
ಶೇಷ	೧೦೩೮	೬	೨

ನ್ಯಾಸ: ಬಲಪಾರ್ಶ್ವದಲ್ಲಿ ಬರೆದ ಪೈ ಯೆಂಬ ಕೀಲ್ಭಾಗಗಳಲ್ಲಿ ಆರಂಭ ಮಾಡಿ, ಈ ಪ್ರಕಾರ ಹೋಳ ಬೇಕು: ೭ ನ್ನು ೯ರಿಂದ ಕಳದರೆ ೨ ಉಳಿಯುತ್ತದೆ; ಈ ೨ ಪೈ ಕೆಳಗೆ ಬರೆದು, ಆಣೆಯ ಸ್ಥಳಕ್ಕೆ ಹೋಗ ಬೇಕು. ೧೫ ಆಣೆ ೫ ಆಣೆಗಳಿಂದ ಕಳೆಯ ಕೂಡದು, ಆದಕಾರಣ ೧ ರೂಪಾಯಿ ತೆಗದು, ಆಣೆ ಮಾಡ ಬೇಕು; ಇದು ೧೬ ಆಣೆ ಆಗುತ್ತದೆ. ೧೬ ಆಣೆ ಮತ್ತು ಮೊದಲು ಇದ್ದ ೫ ಆಣೆ ೨೧ ಆಣೆ ಆಗುತ್ತವೆ; ೧೫ ಆಣೆ ೨೧ರಿಂದ ತೆಗದರೆ, ೬ ಆಣೆ ಉಳಿಯುತ್ತವೆ; ಈ ೬ ಆಣೆ ಕೆಳಗೆ ಆಣೆಗಳ ಸ್ಥಳದಲ್ಲಿ ಬರೆದು, ರೂಪಾಯಿ ಕಳೆಯ ಬೇಕು. ಅಲ್ಲಿ ಇಂನು ೧೮೩೦ ರೂಪಾಯಿ ಅಲ್ಲ ೧೮೨೯ ರೂಪಾಯಿ ಇರುತ್ತವೆ. ಹಾಗಾದರೆ ಯೇಕಗಳ ಸ್ಥಳದಲ್ಲಿ ೧ನ್ನು ೯ರಿಂದ ಕಳದರೆ ೮ ಉಳಿಯುತ್ತದೆ; ದಶಕಗಳ ಸ್ಥಳದಲ್ಲಿ ೯ನ್ನು ೨ರಿಂದ ಕಳೆಯಲಿಕ್ಕೆ ಉಂಟು. ಅದು ಕೂಡದು, ಆದಕಾರಣ ಶತಕಗಳಿಂದ ೧

ತೆಗೆಯ ಬೇಕು; ಅದು ೧೦ ದಶಕ ಆಗುತ್ತದೆ. ಈ ೧೦ ಮತ್ತು ಮೊದಲು ಇದ್ದ ೨ ಕೂಡಿ ೧೨ ಆಗುತ್ತವೆ. ೯ನ್ನು ೧೨ರಿಂದ ತೆಗದರೆ ೩ ಉಳಿಯುತ್ತವೆ; ಇದನ್ನು ದಶಕಗಳ ಸ್ಥಳದಲ್ಲಿ ಬರೆದು, ಶತಕಗಳನು ಕಳೆಯ ಬೇಕು. ಅಲ್ಲಿ ೭ನ್ನು ೭ರಿಂದ ಕಳದರೆ ಯೇನು ಉಳಿಯುವದಿಲ್ಲ; ಆದಕಾರಣ ಸೊಂನೆ ಬರೆದು, ಸಹಸ್ರಗಳನು ಕಳೆಯ ಬೇಕು. ಅಲ್ಲಿ ಯೇನೂ ಕಳಿಯಲಿಕ್ಕೆ ಇರುವದಿಲ್ಲ; ಆದಕಾರಣ ಮೇಲೆ ಇದ್ದ ೧ ಕೆಳಗೆ ಬರಿಯ ಬೇಕು. ಹೀಗೆ ೧೦೩೮ ರೂಪಾಯಿ ೩ ಆಣೆ ೨ಪೈ ಉಳಿಯುತ್ತವೆ.

ಪಾಠಗಳು.

೧.

ಮೈಲ್.	ಯಾರ್ಡ್ಸ್.	ಫೀಟ್.	ಇಂಚ್.
೬೯	೩೯	೧	೨
೨೭	೧೧೨೩	೨	೧೦
೪೧	೬೭೫	೧	೪

೨.

ಯೇಕರ್.	ಗುಂಟೆ.	ಆಣೆ.
೧೦೨	೧೫	೦
೯೩	೨೭	೧
೮	೨೭	೧೫

೩.

ಯೇಕರ್.	ಗುಂಟೆ.	ಆಣೆ.
೩೨೭	೨೩	೧
೨೧೯	೩೨	೨
೧೦೭	೩೦	೧೫

೪.

ರೂ.	ಆ.	ಪೈ.
೩೦೦೦	೧೪	೫
೧೪೧೬	೦	೯
೧೫೮೪	೧೩	೮

೫.

ರೂಪೈ.	ದುಡ್ಡು.
೯೨೪	೩೯
೧೩೭	೪೧
೭೮೬	೪೬

೬.

ರೂ.	ಆ.	ಪೈ.
೭೧೨	೦	೧
೨೪೪	೧೫	೧೧
೪೬೭	೦	೨

೭.

ರೂಪೈ.	ದುಡ್ಡು.
೧೭೫	೨೭
೯೭	೩೬
೭೭	೩೯

೮.

ಸಾಲ ತೆಗದು ಕೊಂಡದ್ದು: ೭೩೯ ರೂ. ೧೪ ಆ. ೩ ಪೈ. ಬೇರೆ ಬೇರೆ ಸಮಯದಲ್ಲಿ ಸಲ್ಲಿಸಿದ್ದು: ೧೨೩ ರೂ. ೧೨ ಆ. ೨ ಪೈ, ೭೯ ರೂ. ೫ ಆ. ೪ ಪೈ, ೨೩ ರೂ. ೧೪ ಆ. ೧೦ ಪೈ, ೩೨೭ ರೂ. ೧೨ ಆ. ೫ ಪೈ. ಇನ್ನು ಯೆಷ್ಟು ಸಾಲ ಕೊಡ ಬೇಕು. ಉತ್ತರ: ೧೮೫ ರೂ. ೧ ಆ. ೬ ಪೈ

೯.

ವರುಷ.	ತಿಂಗಳು.	ದಿವಸ.
೮೫	೭	೧೮
೨೮	೩	೧೮
೫೭	೪	೦

೧೦.

ವರು.	ತಿಂ.	ದಿನ.	ತಾಸು.	ಮಿನಿಟು.
೭೦	೬	೧೪	೯	೪೦
೩೬	೯	೧೫	೦	೫೦
೩೩	೮	೨೯	೮	೫೦

೧೧.

ತಿಂ.	ದಿನ.	ತಾಸು.
೭	೧೩	೨೦
೫	೨೯	೧೭
೧	೧೪	೩

೧೨.

ದಿನ.	ತಾಸು.	ಮಿನಿಟು.
೨೯	೧೭	೨೪
೧೩	೨೨	೪೦
೧೫	೧೮	೪೪

೧೩.

ಕಾಜಿ.	ಮುಡಿ.	ಕಳಸಿ.	ಸೇರು.
೫	೬	೦	೩
೨	೯	೦	೬
೨	೩೮	೨	೧೧

೧೪.

ಕಾ.	ಮು.	ಕ.	ಸೇ.
೯	೩	೨	೨
೫	೮	೧	೬
೩	೩೭	೦	೧೦

೧೫.

ಗಾರ್ಸ್ವ.	ಮರಕಾಲು.	ಪಡಿ.	ಅಳಕ.	ರೂಪ್ಯೈ.
೫	೭	೩	೪	೩
೧	೧೨	೭	೫	೦
೩	೧೯೪	೩	೭	೩

೧೬.

ಗಾರ್ಸ್ವ.	ಮ.	ಪ.	ಅ.	ಸೇ.
೧೩	೧೧	೧	೧	೦
೧೨	೧೯	೭	೭	೧೪
೦	೩೯೧	೧	೧	೧

೧೭.

ಮಣ.	ಕಾಲಾಡ.	ಕುತ್ತಿ.	ಸೇರು.	ರೂಪ್ಯೈ.
೯	೨	೧	೨	೦
೯	೧	೩	೪	೧೬
೦	೦	೧	೨ ೨/೩	೮

೧೮.

ಖಂಡಿ.	ಮಣ.	ಕಾಲಾಡ.	ಕುತ್ತಿ.	ಸೇರು.
೧	೨	೧	೨	೧
೦	೯	೨	೩	೪
೦	೨	೧/೨	೨	೧ ೨/೩

೧೯.

ಮೈಲು.	ಫಾರ್ಲಾಂಗ್.	ಪೋಲ್.	ಫೀಟ್.
೩೨೦	೬	೧೦	೩
೨೦೦	೭	೩೯	೧೦
೧೧೯	೬	೧೦	೯ ೧/೨

೨೦.

ಯಾರ್ಡ್ಸ್.	ಫೀಟ್.	ಇಂಚ್.
೭೫೦	೨	೧
೭೪೮	೨	೧೨
೧	೨	೧

೨೧. ಒಬ್ಬನು ೭ ವರುಷ ಕಲಿಯ ಬೇಕು. ಆ ವಾಯಿದೆಯಲ್ಲಿ ೫ ವರುಷ ೧ ತಿಂಗಳು ೩ ವಾರ ೫ ದಿವಸ ಕಳೆದು ಹೋಯಿತು. ಇನ್ನು ಯೆಷ್ಟು ಸಮಯ ಕಲಿಯ ಬೇಕು. ಉತ್ತರ: ೧ ವರುಷ ೧೦ ತಿಂಗಳು ೨ ದಿವಸ.

೨೨. ಒಬ್ಬನು ೧೫೧೫ ನೆ ಇಸವಿ ಮೇ ೧೨ ತಾರೀಕಿನಲ್ಲಿ ಹುಟ್ಟಿ ೧೫೬೮ ಇಸವಿ ದಶಂಬರ್ ೨೮ ತಾರೀಕಿನಲ್ಲಿ ಸತ್ತನು; ಅವನಿಗೆ ಯೆಷ್ಟು ಪ್ರಾಯ ಆಯಿತು. ಉತ್ತರ: ೫೩ ವರುಷ, ೭ ತಿಂ. ೧೬ ದಿ.

೨೩. ಒಬ್ಬನು ೧೭೧೨ ನೆ ಇಸವಿ ಜನವರಿ ೨೪ ನೆ ತಾರೀಕಿನಲ್ಲಿ ಹುಟ್ಟಿ, ೧೭೮೬ ನೆ ಇಸವಿ ಅಗಾಸ್ತ ೧೭ ನೆ ತಾರೀಕಿನಲ್ಲಿ ಸತ್ತು ಹೋದನು; ಇವನು ಯೆಷ್ಟು ಪ್ರಾಯ ಹೊಂದಿದನು. ಉತ್ತರ: ೭೪ ವ. ೬ ತಿಂ. ೨೪ ದಿ.

೨೪. ಒಬ್ಬನಿಗೆ ೫೪ ವರುಷ ೨ ತಿಂಗಳು ಪ್ರಾಯ ಉಂಟು. ಅವನ ಮಗನು ೨೩ ವರುಷ ೧೮ ದಿವಸ ಕಡಿಮೆ ಪ್ರಾಯದವನಾಗಿದ್ದಾನೆ; ಹಾಗಾದರೆ ಮಗನ ಪ್ರಾಯ ಯೆಷ್ಟು. ಉತ್ತರ: ೩೧ ವ. ೧ ತಿಂ. ೧೨ ದಿ.

೨೫. ಒಬ್ಬನಿಗೆ ೨೬೫೦ ರೂಪೈ ಆಸ್ತಿ, ಮತ್ತು ೯೪೮೦ ರೂಪಾಯಿ ೨೨ ದುಡ್ಡು ೩ ಪೈ ಸಾಲ ಉಂ

ಟು; ಅವನಿಗೆ ಅವನ ಆಸ್ತಿಗಿಂತ ಯೆಷ್ಟು ಹೆಚ್ಚು ಸಾಲ ಉಂಟು. ಉತ್ತರ: ೬೮೩೦ ರು. ೨೨ ದು. ೩ ಪೈ.

೨೬. ಐದು ಜನರಿಗೆ ಹಣ ಪಾಲು ಮಾಡಿ ಕೊಡುತ್ತದೆ. ಮೊದಲನೆಯವನಿಗೆ ೯೨ ರೂಪ್ಯೆ ೪೨ ದುಡ್ಡು, ಯೆರಡನೆಯವನಿಗೆ ಇವನಿಗಿಂತ ೧೬ ರೂಪಾಯಿ ೪೬ ದುಡ್ಡು ಕಡಿಮೆ ಸಿಕ್ಕುತ್ತದೆ, ಮೂರನೆಯವನು ಅವರಿಬ್ಬರಿಗೆ ಸಿಕ್ಕಿದಷ್ಟು ಹೊಂದುತ್ತಾನೆ, ನಾಲ್ಕನೆಯವನಿಗೆ ಮೂರನೆಯವನಿಗಿಂತ ೨೫ ರೂಪಾಯಿ ೪೦ ದುಡ್ಡು ಕಡಿಮೆ ಸಿಕ್ಕುತ್ತದೆ, ಮತ್ತು ಐದನೆಯವನು ೩ ನೆ ೪ ನೆಯವರಿಗೆ ಸಿಕ್ಕಿದಷ್ಟು ಹೊಂದುತ್ತಾನೆ. ಪ್ರಬ್ಬಬ್ಬನಿಗೆ ಯೆಷ್ಟು ಸಿಕ್ಕಿತು, ಮತ್ತು ಯೆಷ್ಟು ಹಣ ಹೊಂಚಿತು. ಉತ್ತರ: ೧ನೆ ೯೨ ರು. ೪೨ ದು., ೨ನೆ ೭೫ ರು. ೪೪ ದು., ೩ ನೆ ೧೬೮ ರು. ೩೮ ದು., ೪ ನೆ ೧೪೨ ರು. ೬೪ ದು., ೫ನೆ ೩೧೧ ರು. ೩೬ ದು., ಒಟ್ಟು ೭೯೨ ರು. ೧೪ ದು.

೮ ನೆ ಸಂಧಿ.

ಮಿಶ್ರ ಸಂಖ್ಯೆಗಳ ಗುಣಾಕಾರ.

೧. ಗುಣಕ ಒಂದೇ ಭಾಗದ ಸಂಖ್ಯೆ, ಗುಣ್ಯ ಮಿಶ್ರ ಸಂಖ್ಯೆಗಳಾದ ಗುಣಾಕಾರದ ಸೂತ್ರ:

೧. ಗುಣ್ಯದಲ್ಲಿದ್ದ ಕೀಳ್ಭಾಗದ ಸಂಖ್ಯೆಯ ಕೆಳಗೆ ಗುಣಕವನ್ನು ಅಂಕೆಗಳ ಬೆಲೆಯ ಪ್ರಕಾರ ಬರಿಯ ಬೇಕು.

೨. ಗುಣಕದಿಂದ ಮೊದಲು ಗುಣ್ಯದ ಕೀಳ್ಭಾಗಗಳಂನು ಗುಣಿಸಿ, ಫಲದಿಂದ ಆಗುವಷ್ಟು ಅದರ ಮೇಲ್ಭಾಗಗಳಂನು ಮಾಡಿ, ಉಳಿದದ್ದು ಗೆರೆಯ ಕೆಳಗೆ ಕೀಳ್ಭಾಗಗಳ ಸ್ಥಳದಲ್ಲಿ ಬರಿಯ ಬೇಕು.

೩. ಆ ಮೇಲೆ ಪಾತ್ತರ ಇರುವ ಮೇಲ್ಭಾಗಗಳಂನು ಗುಣಿಸಿ, ಕೀಳ್ಭಾಗದ ಫಲದಿಂದ ಶಿಕ್ಕಿದ ಈ ಹೆಸರಿನ ಭಾಗಗಳಂನು ಅದಕ್ಕೆ ಕೂಡಿಸಿ, ಒಟ್ಟಿನಿಂದ ಆಗುವಷ್ಟು ಪಾತ್ತರ ಇರುವ ಮೇಲ್ಭಾಗಗಳಂನು ಮಾಡಿ, ಉಳಿದದ್ದನ್ನು ಗೆರೆಯ ಕೆಳಗೆ, ಈಗ ಗುಣಿಸಿದ ಭಾಗಗಳ ಸ್ಥಳದಲ್ಲಿ ಬರಿಯ ಬೇಕು.

೪. ಅದೇ ಪ್ರಕಾರ ಇನ್ನು ಇದರ ಮೇಲೆ ಇರುವ ಮೇಲ್ಭಾಗಗಳಿಗೆ ಮಾಡ ತಕ್ಕದ್ದು.

ಉದಾಹರಣೆ.

೩ ರೂಪೈ ೧೩ ಆಣೆ ೪ ಪೈ ೯ರಿಂದ ಗುಣಿಸ ಬೇಕು

ರೂ.	ಆ.	ಪೈ.
೩	೧೩	೪
		೯
೩೪	೮	೦

ನ್ಯಾಸ: ಮೊದಲು ಪೈಗಳಂನು ಗುಣಿಸ ಬೇಕು: ೯×೪=೩೬ ಪೈಗಳು=೩ ಆಣೆ. ಪೈ ಉಳಿಯುವದಿಲ್ಲ. ಆ ಮೇಲೆ ೧೩ ಆಣೆ ಗುಣಿಸ ಬೇಕು: ೯×೧೩=೧೧೭ ಆಣೆಗಳು, ಮತ್ತು ಕೈಯಲ್ಲಿ ಇದ್ದ ೩ ಆಣೆ=೧೨೦ ಆಣೆ; ಇವುಗಳು ೭ ರೂ. ೮ ಆಣೆ ಆಗುತ್ತವೆ. ೮ ಆಣೆ ಆಣೆಗಳ ಸ್ಥಳದಲ್ಲಿ ಬರೆದು, ೭ ರೂ. ಕೈಯಲ್ಲಿಟ್ಟು, ರೂಪಾಯಿಗಳಂನು ಗುಣಿಸ ಬೇಕು: ೯×೩=೨೭ ಮತ್ತು ಕೈಯಲ್ಲಿದ್ದ ೭=೩೪ ರೂಪಾಯಿಗಳು. ಇವುಗಳಂನು ರೂಪಾಯಿಗಳ ಸ್ಥಳದಲ್ಲಿ ಬರಿಯ ಬೇಕು. ಈ ಪ್ರಕಾರ ಇದಿ ಲಬ್ಧ ೩೪ ರೂ. ೮ ಆ. ೦ ಪೈ ಇರುತ್ತದೆ.

೨. ಗುಣ್ಯವೂ ಗುಣಕವೂ ವೊಂದೇ ಜಾತಿಯ ಮಿಶ್ರ ಸಂಖ್ಯೆಗಳಾದ ಗುಣಾಕಾರಕ್ಕೆ ಸೂತ್ರ:

ಯೆರಡರ ಭಾಗಗಳಂನು ಆ ಜಾತಿಯ ಕ್ಷುಲ್ಭಾಗದ ಸಂಖ್ಯೆ ಮಾಡಿ, ಗುಣಿಸು. ಶಿಕ್ಕುವ ಫಲವು ಕ್ಷುಲ್ಭಾಗದ ಸಂಖ್ಯೆಯಾಗಿದೆ. ಆವದರಿಂದ ಅದಂನು ತಿರಿಗಿ ಆಗುವಷ್ಟು ಮೇಲ್ಭಾಗಗಳಂನು ಮಾಡ ಬೇಕು.

ಉದಾಹರಣೆ.

೨೦ ಫೀಟ್ ೮ ಇಂಚ್ ಉದ್ದ, ೨ ಫೀಟ್ ೭ ಇಂಚ್ ಅಗಲ ಅಥವ ಯೆತ್ತರವಾದ ಗ್ಯಾಡೆ ಯೆಷ್ಟು ಚೌಕ ಫೀಟ್ ದೊಡ್ಡದಾಗಿದೆ.

```
   ೨೦' ೮" × ೨' ೭"
   ೧೨        ೧೨
   ──        ──
   ೪೦        ೩೧"
  ೨೦೮
  ───
  ೨೪೮"
    ೩೧
  ───
  ೨೪೮
 ೭೪೭
 ────
೧೪೪)೭೭೧೮□"(೫೩□' ೬೭□"
    ೭೨೦
    ───
     ೫೧೮
     ೪೩೨
     ───
      ೬೭
```

ನ್ಯಾಸ: ಇದರಲ್ಲಿ ೨೦' ೮" ಉದ್ದಳತೆಯನ್ನು ೨' ೭" ಅಗಲಳತೆಯಿಂದ ಗುಣಿಸಲಿಕ್ಕುಂಟು. ಆದರಿಂದ ಯೆಲ್ಲಾ ಇಂಚ್ ಮಾಡ ಬೇಕು. ವಾಂದು ಫೂಟಿಗೆ ೧೨ ಇಂಚ್ ಇದ್ದರೆ, ೨೦' ೧೨ ರಿಂದ ಗುಣಿಸಿ, ೮ ಇಂಚ್ ಅದಕ್ಕೆ ಕೂಡಿಸ ಬೇಕು; ಅದು ೨೪೮ ಇಂಚ್. ಅದ್ಯೇ ಪ್ರಕಾರ ೨'×೧೨=೨೪" ಮತ್ತು ೭"=೩೧". ಈಗ ೨೪೮"×೩೧"=೭೭೧೮". ಇದು ಚೌಕ ಇಂಚ್'ಗಳು. ೧೪೪ ಚೌಕ ಇಂಚ್ ೧ ಚೌಕ ಫೂಟ್ ಆಗುತ್ತವೆ. ಆದದರಿಂದ ೭೭೧೮□" ÷ ೧೪೪ = ೫೩□' ೬೭□".

ಪಾಠಗಳು.

	ರೂ.	ಅ.	ಪೈ.
೧)	೩೪೦	೧೦	೪ × ೧೪, ೧೫, ೧೬.
೨)	೭೩೦	೮	೧೧ × ೬೪, ೫೬, ೩೪.
೩)	೧೨೭೦	೬	೯ × ೧೧೩, ೯೭, ೧೫೪.
೪)	೧೭೨	೯	೩ × ೩೭೯, ೮೪೫,

೯೩೨, ೬೯೧, ೭೦೨, ೩೯೬, ೧೨೩೪, ೫೬೭೮; ೩೦೦೫, ೭೦೮೨, ೯೮೦೩, ೫೮೪೦.

ಉತ್ತರ.

೧)	೪೭೬೯ ರೂ.	೦ ಅ.	೮ ಪೈ.
	೫೧೦೯ ″	೧೧ ″	೦ ″
	೫೪೫೦ ″	೫ ″	೪ ″
೨)	೪೬೭೫೫ ″	೧೦ ″	೮ ″
	೪೦೯೧೧ ″	೩ ″	೪ ″
	೨೪೮೩೮ ″	೧೫ ″	೨ ″
೩)	೧೪೩೫೫೭ ″	೧೦ ″	೯ ″
	೧೨೩೨೩೦ ″	೧೪ ″	೯ ″
	೧೯೫೬೪೪ ″	೧೫ ″	೬ ″
೪)	೬೫೪೦೭ ″	೧ ″	೯ ″
	೧೪೫೮೨೮ ″	೮ ″	೩ ″
	೧೬೦೮೪೨ ″	೧೩ ″	೦ ″
	೧೧೯೨೫೧ ″	೭ ″	೯ ″
	೧೨೧೧೪೯ ″	೧೩ ″	೬ ″
	೬೮೩೪೦ ″	೧೫ ″	೦ ″
	೨೧೨೯೬೧ ″	೬ ″	೬ ″
	೯೭೯೮೯೮ ″	೯ ″	೬ ″
	೫೧೮೫೯೭ ″	೪ ″	೩ ″

೧೨೨೧೯೮ ರೂ. ೪ ಅ. ೬ ಪೈ.
೬೯೧೭೮೩ „ ೫ „ ೯ „
೧೦೦೭೮೫೬ „ ೪ „ ೦ „

೫. ೧ ಮುಡಿ ೪ ಸೇರು ಬೀಜ ಹೋಗುವ ಗದ್ದೆ ಆ ಬೀಜದ ೪೦ ಪಾಲು ಹೆಚ್ಚು ಫಲಿಸಿದರೆ, ಆ ಗದ್ದೆಯಲ್ಲಿ ಯೆಷ್ಟು ಹುಟ್ಟುವಳಿ ಬಂದೀತು. ಉತ್ತರ: ೪೩ ಮುಡಿ ೩೪ ಸೇರು.

೬. ಒಂದು ಸಾಲುಮರ ತಂನ ಅಗಲಕ್ಕಿಂತ ೫೦೦೦ ಹೆಚ್ಚು ಉದ್ದವಾಗಿದ್ದರೆ, ಒಂದು ಕಡೆಯಲ್ಲಿ ನಿಲ್ಲುವವನಿಗೆ ಆ ಯೆರಡು ಸಾಲು ಆಚೆ ಕಡೆಯಲ್ಲಿ ಕೂಡುವ ಹಾಗೆ ಕಾಣುತ್ತವೆ. ಹಾಗಾದರೆ ಒಂದು ಸಾಲುಮರ ೨೨ ಫೀಟ್ ೬ ಇಂಚ್ ಅಗಲ ಇರುವಾಗ, ಅದು ಬುಡದಲ್ಲಿ ಒಂದಾಗಿ ಕಾಣುವ ಹಾಗೆ ಯೆಷ್ಟು ಉದ್ದವಾಗಿರ ಬೇಕು. ಉತ್ತರ: ೧೧೨೫೦೦ ಫೀಟ್.

೭. ಹೃದಯ ಒಂದು ಮಿನಿಟದೊಳಗೆ ೭೫ ಸಾರಿ ಹೊಡಿಯುತ್ತದೆ, ಒಂದು ವರುಷದೊಳಗೆ ಯೆಷ್ಟು ಸಾರಿ ಹೊಡದೀತು. ಉತ್ತರ: ೩೯೪೨೦೦೦೦ ಸಾರಿ.

೮. ಒಂದು ಪಕ್ಷಿ ೧ ಮಿನಿಟದೊಳಗೆ ೯೦೦೦ ಫೀಟ್ ದೂರ ಹಾರಿದರೆ ಒಂದು ಮೈಲ್ ದೂರ ಹಾರಲಿಕ್ಕೆ ಯೆಷ್ಟು ಸೆಕುಂಡಗಳು ಬೇಕು. ಉತ್ತರ: ೩೫ ೧/೫ ಸೆಕುಂಡ.

೯. ವೊಬ್ಬನು ವೊಂದು ವಾರದಲ್ಲಿ ೧೨ ದುಡ್ಡು ಹೊಗೆಸೊಪ್ಪಿಗೆ ಖರ್ಚು ಮಾಡಿದರೆ ಅವನು ೧೦ ವರುಷದಲ್ಲಿ ಯೆಷ್ಟು ಖರ್ಚು ಮಾಡುವನು. ಉತ್ತರ: ೧೩೦ ರೂ.

೧೦. ವೊಬ್ಬ ಮೇಸ್ತ್ರಿ, ೧೭ ಜನ ಕಲ್ಲುಕುಟ್ಟಿಗರು, ೫ ಜನ ಕಲ್ಲು ಕಾಡುವವರು ೮ ದಿವಸ ಕೆಲಸ ಮಾಡಿ, ಮೇಸ್ತ್ರಿ ದಿನಕ್ಕೆ ೨೪ ದುಡ್ಡು, ಆ ಕಲ್ಲುಕುಟ್ಟಿಗರು ವೊಬ್ಬೊಬ್ಬನು ೨೦ ದುಡ್ಡು, ಆ ಹೊರುವ ವೊಬ್ಬೊಬ್ಬನು ೬ ದುಡ್ಡು ಹೊಂದಿದರೆ, ಅವರೆಲ್ಲರಿಗೆ ಕೂಡಿ ಯೆಷ್ಟು ಶಿಕ್ಕುತ್ತದೆ. ಉತ್ತರ: ೬೫ ರೂ. ೩೨ ದು.

೧೧. ಶಬ್ದ ೧ ಸೆಕುಂಡದಲ್ಲಿ ೧೦೩೮ ಫೀಟ್ ದೂರ ಹೋಗುತ್ತದೆ; ವೊಂದು ಮೈಲ್ ದೂರ ಹೋಗಲಿಕ್ಕೆ ಯೆಷ್ಟು ಸೆಕುಂಡ ಬೇಕು. ಉತ್ತರ: ೫ $\frac{೯೦}{೧೦೩೮}$ ಸೆಕುಂಡ.

೧೨. ವೊಬ್ಬನು ೧೨ ಬೆಳ್ಳಿ ಸೌಟುಗಳಂನು ಕ್ರಯಕ್ಕೆ ತೆಗೆಯುತ್ತಾನೆ; ಆದರೆ ಹೇಳಿದ ಕ್ರಯ ಅವನಿಗೆ ಹೆಚ್ಚು ಕಾಣುವದರಿಂದ, ಅಕಸಾಲಿಗನು ಮೊದಲಿನ ಸೌಟಿಗೆ ೧ ರುಪ್ಪಿ, ಯೆರಡನೆದಕ್ಕೆ ೩ ಸಾರಿ ಹೆಚ್ಚು, ಮೂರನೆದಕ್ಕೆ ಯೆರಡನೆದರಿಂದ ೩ ಸಾರಿ ಹೆಚ್ಚು, ಮತ್ತು ಹೀಗೆ ಹಂನೆರಡನೆ ಪರಿಯಂತರ ವೊಂದೊಂದಕ್ಕೆ ಅದರ ಮೊದಲನ್ಯೇ ಸೌಟಿನಿಂದ ೩ ಸಾರಿ ಹೆಚ್ಚು ಕ್ರಯ ಮಾಡುತ್ತಾನೆ. ವೊಂದೊಂದು ಸೌಟಿಗೆ

ಯೇನು ಕ್ರಯ, ಮತ್ತು ೧೨ ಸೌಟುಗಳಿಗೆ ಕೂಡಿ ಯೆಷ್ಟು ಕ್ರಯ (ಅವನು ಮೊದಲು ೧ ಸೌಟಿಗೆ ೧ ೩/೪ ರೂಪಾಯಿ ಕೇಳಿದನು). ಉತ್ತರ: ೧ ಪೈ, ೩ ಪೈ, ೯ ಪೈ, ೨ ಆ. ೩ ಪೈ, ೬ ಆ. ೯ ಪೈ, ೧ ರೂ. ೪ ಆ. ೩ ಪೈ, ೩ ರೂ. ೧೨ ಆ. ೯ ಪೈ, ೧೧ ರೂ. ೬ ಆ. ೩ ಪೈ, ೩೪ ರೂ. ೨ ಆ. ೯ ಪೈ, ೧೦೨ ರೂ. ೮ ಆ. ೩ ಪೈ, ೩೦೭ ರೂ. ೮ ಆ. ೯ ಪೈ, ೯೨೨ ರೂ. ೧೦ ಆ. ೩ ಪೈ, ಮೊಟ್ಟು ೧೨೮೩ ರೂ. ೧೫ ಆ. ೪ ಪೈ.

೧೩. ವೊಬ್ಬನು ವೊಂದು ಕುದುರೆಯಂನು ಮಾರುವಾಗ ಅವನು ೨೪ ಶಾಸು ವಾಯಿದೆಯಲ್ಲಿ ೧ ಶಾಸಿಗೆ ೧ ರುಪ್ಪಿ ಮತ್ತು ಬರುವ ವಾಂದಾಂದು ಶಾಸಿಗೆ ಅದರ ಮೊದಲಿನ ಶಾಸಿಗೆ ಕೊಟ್ಟದರಿಂದ ವಾಂದು ಸಾರಿ ಹೆಚ್ಚು ಕಾಡಬೇಕೆಂದು ಹೇಳುತ್ತಾನೆ. ಆ ಕುದುರೆಗೆ ಯೆಷ್ಟು ಕ್ರಯವಾದೀತು. ಉತ್ತರ: ೮೭೩೮೧ ರೂ. ೫ ಆ. ೩ ಪೈ.

೧೦ನೆ ಸಂಧಿ.

ಮಿಶ್ರ ಸಂಖ್ಯೆಗಳ ಭಾಗಾಕಾರ.

೧. ಭಾಜ್ಯ ಮಾತ್ರ ಮಿಶ್ರ ಸಂಖ್ಯೆಗಳು, ಭಾಜಕ ಶುದ್ಧ ಸಂಖ್ಯೆ ಇರುವ ಭಾಗಾಕಾರಕ್ಕೆ ಸೂತ್ರ:

೧. ಮೊದಲು ಭಾಜ್ಯದಲ್ಲಿ ಹೇಳಿದ ಮೇಲ್ಭಾಗದ ಸಂಖ್ಯೆಯನ್ನು ಭಾಗಿಸ ಬೇಕು. ಅದರಲ್ಲಿ ಶಿಕ್ಕುವ ಲಬ್ಧ ಭಾಗಿಸಿದ ಭಾಗದಂಥಾದ್ದಾಗೆದೆ.

೨. ಈ ಮೇಲ್ಭಾಗದಿಂದ ಉಳಿದದ್ದನ್ನು ಅದರ ಕೆಳಗೆ ಇರುವ ಭಾಗಗಳಾಗ ಮಾಡಿ, ಭಾಜ್ಯದಲ್ಲಿ ಹೇಳಿದ ಅದೇ ಹೆಸರಿನ ಭಾಗಗಳಿಗೆ ಕೂಡಿಸಿ, ಭಾಜಕದಿಂದ ಭಾಗಿಸ ಬೇಕು. ಇದರಿಂದ ಶಿಕ್ಕುವ ಲಬ್ಧ ಈ ಹೆಸರಿನ ಭಾಗಗಳಾಗಿದೆ. ಅದನ್ನು ಮೊದಲಿನ ಲಬ್ಧದ ಬಲಪಾರ್ಶ್ವದಲ್ಲಿ ಬರಿಯ ಬೇಕು.

೩. ಇದೇ ಪ್ರಕಾರ ಭಾಜ್ಯದ ಉಳಿದ ಭಾಗಗಳಿಗೆ ಮಾಡ ಬೇಕು.

೪. ಮಿಶ್ರ ಸಂಖ್ಯೆಗಳ ಗುಣಾಕಾರದಲ್ಲಿಯೂ ಭಾಗಾಕಾರದಲ್ಲಿಯೂ ಲೆಖ್ಖ ಸಮವಾಯಿತ್ತಾ ಯೆಂದು ನೋಡುವದು ಶುದ್ಧ ಸಂಖ್ಯೆಗಳಲ್ಲಿ ತೋರಿಸಿದ ಹಾಗೆ ಆಗುತ್ತದೆ.

ಉದಾಹರಣೆ.

೨೩ ರೂ. ೧೫ ಆ. ೮ ಪೈ. ೯ ರಿಂದ ಭಾಗಿಸ ಬೇಕು.

	ರೂ.	ಆ.	ಪೈ.
೯)	೨೩	೧೫	೮
	೨	೧೦	೭ ೫/೯

ನ್ಯಾಸ. ಇದರಲ್ಲಿ ಮೊದಲು ರೂಪಾಯಿಗಳನ್ನು ೯ ರಿಂದ ಭಾಗಿಸ ಬೇಕು.

೨೩ ರೂ. ÷ ೯ = ೨ ರೂಪಾಯಿ, ಮತ್ತು ೫ ರೂಪಾಯಿ ಉಳಿಯುತ್ತದೆ. ಇವುಗಳು ಆಣೆಗಳಾಗ ಬೇಕು. ೫ ರೂ. = ೮೦ ಆಣೆ; ಇವುಗಳು ಮತ್ತು ಭಾಜ್ಯದಲ್ಲಿ ಹೇಳಿದ ೧೫ ಆಣೆ ಕೂಡಿ ೯೫ ಆಗುತ್ತವೆ. ಇದನ್ನು ೯ ರಿಂದ ಭಾಗಿಸಿದರೆ, ೧೦ ಆಣೆ ಆಗುತ್ತವೆ, ಮತ್ತು ೫ ಆಣೆ ಉಳಿಯುತ್ತವೆ. ಈ ೫ ಆಣೆ ಪೈಗಳಾಗ ಬೇಕು. ೫ ಆ. = ೬೦ ಪೈ, ಮತ್ತು ಭಾಜ್ಯದಲ್ಲಿ ಹೇಳಿದ ೮ ಪೈ ಕೂಡಿ ೬೮ ಆಗುತ್ತವೆ. ೬೮ ಪೈ ÷ ೯ = ೭ ಪೈ, ಮತ್ತು ೫ ಪೈ ಉಳಿಯುತ್ತವೆ. ಇವುಗಳನ್ನು ೯ ರಿಂದ ಭಾಗ ಮಾಡಿದರೆ, ಒಂದರಲ್ಲಿ ಒಂದು ಒಂಭತ್ತನೆ ಭಾಗ, ೫ ದರಲ್ಲಿ ೫ ಒಂಭತ್ತನೇ ಭಾಗಗಳು ಆಗುತ್ತವೆ. ಹೀಗೆ ಲಬ್ಧ ೨ ರೂ. ೧೦ ಆಣೆ ೭ ೫/೯ ಪೈ.

೨. ಭಾಜ್ಯವೂ ಭಾಜಕವೂ ಒಂದೇ ಜಾತಿಯ ಮಿಶ್ರ ಸಂಖ್ಯೆಗಳಾಗಿದ್ದರೆ, ಭಾಜ್ಯದಲ್ಲಿರುವ ಬೇರೆ ಬೇರೆ ಭಾಗಗಳ

ಸಂಖ್ಯೆಗಳಂನೂ ಭಾಜಕದ ಸಂಖ್ಯೆಗಳಂನೂ ಆ ಜಾತಿಯ ಕೀಳ್ಭಾಗಗಳಂನು ಮಾಡಿ, ಭಾಗಿಸಿ, ಲಬ್ಧದಿಂದ ತಿರಿಗಿ ಆಗುವಷ್ಟು ಮೇಲ್ಭಾಗಗಳಂನು ಮಾಡ ಬೇಕು.

ಉದಾಹರಣೆ.

೧೮೩ ಚೌಕ ಫೀಟ್ ೩೦ ಇಂಚ್ ದೊಡ್ಡದಾದ ಸ್ಥಳ ೭ ಫೀಟ್ ೮ ಇಂಚ್ ಅಗಲ ಉಂಟು; ಅದರ ಉದ್ದ ಯೇನು.

```
      ೧೮೩□' ೩೦" ÷ ೭' ೮"
      ೧೪೪         ೧೨
      ----        ----
      ೭೩೨         ೯೨ "
    ೭೩೨
   ೧೮೩೩೦
   ---------
೯೨)೨೬೩೮೨(೨೮೬ ೭೦/೯೨ "
   ೧೮೪
   -----
    ೭೯೮    ೧೨)೨೮೬(೨೩'
    ೭೩೬        ೨೪
    -----      ----
     ೬೨೨        ೪೬
     ೫೫೨        ೩೬
     ----       ----
      ೭೦        ೧೦ ೭೦/೯೨ "
```

ನ್ಯಾಸ: ಈ ಲೆಖ್ಖದಲ್ಲಿ ೭' ೮" ಅಗಲಳತೆಯಿಂದ ೧೮೩□' ೩೦" ಚೌಕಳತೆಯಂನು ಭಾಗಿಸ ಬೇಕು, ಆಗ್ಯೆ ಆ ಸ್ಥಳದ ಉದ್ದ ಸಿಕ್ಕುತ್ತದೆ. ೧ ಫೂಟ್ ಉದ್ದಳತೆಗೆ ೧೨ ಇಂಚ್ ಉಂಟು; ಆದದರಿಂದ ೭' ೮" = ೯೨". ೧ ಚೌಕ ಫೂಟಿಗೆ ೧೪೪" ಉಂಟು; ಆದದರಿಂದ ಆ ೧೮೩□' ೧೪೪ ರಿಂದ ಗುಣಿಸಿ

ಆ ೩೦" ಅದಕ್ಕೆ ಕೂಡಿಸ ಬೇಕು; ಅದು ೨೬೩೮೨□". ಇವುಗಳಂನು ೯೨ರಿಂದ ಭಾಗಿಸಿದರೆ ೨೮೬ $\frac{೭೦}{೯೨}$" ಉದ್ದ ಶಿಕ್ಕುತ್ತದೆ. ಈ ಇಂಚುಗಳಂನು ತಿರಿಗಿ ೧೨ ರಿಂದ ಭಾಗಿಸಿ ಫೀಟ್ ಮಾಡ ಬೇಕು; ಮಾಡಿದರೆ ೨೩' ೧೦ $\frac{೭೦}{೯೨}$" ಉದ್ದ ಶಿಕ್ಕುತ್ತದೆ.

೩. ಭಾಜ್ಯ ಭಾಜಕ ಬೇರೆ ಬೇರೆ ಜಾತಿಯ ಮಿಶ್ರ ಸಂಖ್ಯೆಗಳಾಗಿದ್ದ ಲೆಖ್ಖದ ರೀತಿ ತ್ರೈರಾಶಿಕದಲ್ಲಿ ತ್ಯಾರಿಸಲ್ಪಡುವದು.

ಪಾಠಗಳು.

ರೂ. ಆ. ಪೈ.

೧) ೬೪೫ ೯ ೧೧ ÷ ೬೩, ೮೦, ೧೦೮.
೨) ೪೬೫ ೧೫ ೩ ÷ ೪೯, ೬೪, ೮೧.
೩) ೮೫೩ ೧೨ ೮ ÷ ೫೪, ೭೦, ೯೬.
೪) ೭೩೨೯ ೧೪ ೫ ÷ ೮೪೨, ೮೩೧೭, ೯೧೨.
೫) ೬೩೯ ೩ ೧೧ ÷ ೩೭, ೯೩, ೪೯೧.

ಮುಡಿ. ಕಳಸಿ. ಸೇ.

೬) ೩೦೭ ೧ ೧೦ ÷ ೧೭, ೫೧, ೧೨೬.
೭) ೮೪೫೬ ೨ ೧೨ ÷ ೭೮೫೬, ೩೯೨, ೫೭೩.

ಮುಡಿ. ಸೇರು.

೮) ೩೨೫ ೩೭ ÷ ೨೩, ೮೭, ೭೧೨.
೯) ೨೪೯ ೨೫ ÷ ೫೫, ೬೬, ೧೪೪.
೧೦) ೬೪೫ ೧೯ ÷ ೬೩, ೩೯, ೧೦೮.

ದಿವಸ. ತಾಸು. ಮಿನಿಟ. ಸೆಕುಂಡ.

೧೧) ೩೬೫ ೫ ೪೮ ೫೧ ÷ ೧೨.

ಉತ್ತರ.

	ರೂ.	ಆ.	ಪೈ.		ಮುಡಿ.	ಕಳಸಿ.	ಸೇರು.
೧)	೧೦	೩	೧೧ ೩೭/೬೩	೬)	೧೮	೦	೩ ೧೫/೧೭
	೮	೧	೧ ೩೮/೮೦		೬	೦	೧ ೧೫/೫೧
	೫	೧೫	೭ ೮೨/೧೦೮		೨	೧	೪ ೬೬/೧೨೬
೨)	೯	೮	೧ ೩೮/೪೯	೭)	೧	೦	೩ ೧೬೭೨/೭೮೫೬
	೭	೪	೫ ೫೫/೬೪		೨೧	೧	೧೦ ೪೦/೨೯೨
	೫	೧೨	೩೯/೮೧		೧೪	೨	೩ ೫೦೫/೫೭೩

	ರೂ.	ಆ.	ಪೈ.		ಮುಡಿ.	ಸೇರು.
೩)	೧೫	೧೨	೧೧ ೩೮/೫೪	೮)	೧೪	೭ ೨/೨೩
	೧೨	೩	೧ ೫೮/೭೦		೩	೩೧ ೨೮/೮೭
	೮	೧೪	೩ ೫೬/೯೬		೦	೧೯ ೧೫೯/೭೧೨
೪)	೮	೧೧	೩ ೩೫೯/೮೪೨	೯)	೪	೨೨ ೩೩/೫೫
		೧೪	೧ ೧೭೬೮/೮೩೧೭		೩	೩೨ ೫೫/೬೬
	೮	೦	೭ ೧೨೫/೯೧೨		೧	೩೦ ೧೧೫/೧೪೪
೫)	೧೭	೪	೫ ೬/೩೭	೧೦)	೧೦	೧೦ ೧೯/೬೩
	೬	೧೩	೧೧ ೬೮/೯೩		೧೬	೨೩ ೪/೩೯
	೧	೪	೯ ೪೭೬/೪೯೧		೫	೪೧ ೧/೧೦೮

	ದಿನ.	ತಾಸು.	ಮಿನಿಟ.	ಸೆಕುಂಡ.
೧೧)	೩೦	೧೦	೨೯	೪ ೩/೧೨

೧೨) ಮೊದಲನೆಯವನಿಗೆ ೬೨೫೨ ರೂಪಾಯಿ ೪೦ ದುಡ್ಡು, ಯೆರಡನೆಯವನಿಗೆ ೧ನೆಯವನಿಗಿಂತ ಅರ್ಧ, ಮೂರನೆಯವನಿಗೆ ೨ನೆಯವನಿಗಿಂತ ಅರ್ಧ ಬರುತ್ತದೆ. ಈ ಇಬ್ಬರಲ್ಲಿ ಒಬ್ಬೊಬ್ಬನಿಗೆ ಯೆಷ್ಟು ರೂಪಾಯಿ ಉಂಟು. ಉತ್ತರ: ಯೆರಡನೆಯವನಿಗೆ ೩೧೨೬ ರೂ. ೨೦ ದು. ೩ನೆಯವನಿಗೆ ೧೫೬೩ ರೂ. ೧೦ ದು.

೧೩) ಒಬ್ಬನು ತಂನ ಅಳತೆಯ ಅರ್ಧದಷ್ಟು ದೊಡ್ಡ ಕಂನಡಿಯಲ್ಲಿ ತನ್ನನ್ನು ಪೂರ್ಣವಾಗಿ ನೋಡುತ್ತಾನೆ. ಅವನು ೬ ಫೀಟ್ ೩ ೧/೨ ಇಂಚ್ ಉದ್ದವಾಗಿದ್ದರೆ ಅವನ ಇಡೀ ರೂಪ ತೋರಿಸುವ ಕಂನಡಿ ಯೆಷ್ಟು ದೊಡ್ಡದಾಗಿರ ಬೇಕು. ಉತ್ತರ: ೩ ಫೀಟ್ ೧ ೩/೪ ಇಂಚ್.

೧೪) ವಾಯು ನೀರಿನಿಂದ ೮೦೦ ಪಾಲು ಹಗುರವಾಗಿ ಇರುತ್ತದೆ; ಹಾಗಾದರೆ ೧ ಸಲೆ ಫೂಟ್ ನೀರು ೫೦ ರಾತ್ಲು ಬಾಧಿಯಾಗಿದ್ದರೆ, ೧ ಸಲೆ ಫೂಟ್ ವಾಯು ಯೆಷ್ಟು ಬಾಧಿಯಾಗಿದೆ. ಉತ್ತರ: ೫೦/೮೦೦ ರಾತ್ಲು.

೧೫) ಒಬ್ಬನು ತನ್ನ ಬದುಕನ್ನು ವರ್ಷಕ್ಕೆ ೫ನೆ ಪಾಲಷ್ಟು ಹೆಚ್ಚಿಸುತ್ತಾನೆ. ಅವನಿಗೆ ೮೪೬೨ ರೂ. ೩೦ ದುಡ್ಡು ಇದ್ದರೆ, ಅದು ೩ನೇ ವರ್ಷದ ಅಂತ್ಯಕ್ಕೆ ಯೆಷ್ಟು ದೊಡ್ಡದಾಗುವದು. ಉತ್ತರ: ೧೪೬೨೩ ರೂ. ೬೨೦/೬೨೫ ದುಡ್ಡು.

೧೬) ವೊಂದು ಮುಡಿ ಸುಂಗಾಕ್ಕೆ ೬ ದುಡ್ಡು ಕ್ರಯವಿದ್ದರೆ ೨೪ ರೂಪಾಯಿಗೆ ಯೆಷ್ಟು ಮುಡಿ ಶಿಕ್ಕುವದು. ಉತ್ತರ: ೧೯೨ ಮುಡಿ.

೧೭) ಇಬ್ಬರು ಕೂಡಿ ೧೫ ರೂಪಾಯಿ ಸಾಲ ಸಲ್ಲಿಸಬೇಕು; ಆದರೆ ಅದರಲ್ಲಿ ವೊಬ್ಬನು ಮತ್ತೊಬ್ಬನಿಗಿಂತ ೮ ಸಾರಿ ಹೆಚ್ಚು ಕಾಡ ಶಕ್ಕ ಇರುವದರಿಂದ ವೊಬ್ಬೊಬ್ಬನು ಯೆಷ್ಟು ರೂಪಾಯಿ ಕಾಡ ಬೇಕು. ಉತ್ತರ: ವೊಬ್ಬನು ೧ ರೂ. ೧೦ ಆ. ೮ ಪೈ, ಮತ್ತೊಬ್ಬನು ೧೩ ರೂ. ೫ ಆ. ೪ ಪೈ.

೧೮) ಮೂರು ಜನರಿಗೆ ೧೭ ರೂಪಾಯಿ ೩೬ ದುಡ್ಡು ಕೂಲಿ ಶಿಕ್ಕಿತು. ವೊಬ್ಬನು ೩ ದಿವಸ, ವೊಬ್ಬನು ೯, ಮತ್ತೊಬ್ಬನು ೧೨ ದಿವಸ ಕೆಲಸ ಮಾಡಿದ್ದರೆ ವೊಬ್ಬೊಬ್ಬನಿಗೆ ಯೆಷ್ಟು ಶಿಕ್ಕಿತು. ಉತ್ತರ: ೧ನೆಯವನಿಗೆ ೨ ರೂ. ೧೦ತ್ತಿದು., ೨ನೆಯವನಿಗೆ ೬ ರೂ. ೩೧ತ್ತಿದು., ೩ನೆಯವನಿಗೆ ೮ರೂ. ೪೨ ದುಡ್ಡು.

೧೯) ಮೂವರು ಕೂಡಿ ೪೨೦ ರೂಪಾಯಿ ಕಾಡ ಬೇಕು; ಮೊದಲನೆಯವನು ೧ ಪಾಲು, ೨ನೆಯವನು ೧ನೆಯವನಿಗಿಂತ ೫ ಸಾರಿ ಹೆಚ್ಚು, ೩ನೆಯವನು ೨ನೆಯವನಿಗಿಂತ ೩ ಸಾರಿ ಹೆಚ್ಚು. ವೊಬ್ಬೊಬ್ಬನು ಯೆಷ್ಟು ರೂಪಾಯಿ ಕಾಡ ಬೇಕು. ಉತ್ತರ: ೧ನೆ ೨೦ ರೂ. ೨ನೆ ೧೦೦ ರೂ. ೩ನೆ ೩೦೦ ರೂ.

೨೦) ಇಬ್ಬರು ೧೬೦ ರೂಪಾಯಿಯಲ್ಲಿ ಕೊಡ ತಕ್ಕ ೧ನೆಯವನು ೨ನೆಯವನಿಗಿಂತ ೭ ಸಾರಿ ಹೆಚ್ಚು ಕೊಡ ಬೇಕು; ವೊಬ್ಬೊಬ್ಬನು ಯೆಷ್ಟು ರೂಪಾಯಿ ಕೊಡ ಬೇಕು. ಉತ್ತರ: ೧ನೆ ೧೪೦ ರೂ. ೨ನೆ ೨೦ ರೂ.

ಸ್ಥಳ ಲೆಖ್ಖದ ಪಾಠಗಳು.

ಉದ್ದವಂನು ಅಗಲದಿಂದ ಯೇರಿಸಿದರೆ ಚೌಕಳತೆ, ಮತ್ತು ಉದ್ದ ಅಗಲ ದಪ್ಪ ವೊಂದರಿಂದೊಂದು ಯೇರಿಸಿದರೆ ಘನ ಅಳತೆ ಶಿಕ್ಕುತ್ತದೆ.

೧. ವೊಂದು ಕೋಣೆ ೨೨ ಫೀಟ್ ಉದ್ದ ೧೮ ಫೀಟ್ ಅಗಲವಾಗಿದೆ; ಅದಕ್ಕೆ ಚೌಕ ಯೆಷ್ಟು ಫೀಟ್. ಉತ್ತರ: ೩೯೬ ಚೌಕ ಫೀಟ್.

೨. ವೊಂದು ಸ್ಥಳ ೧೨ ಫೀಟ್ ಉದ್ದ ೧೨ ಫೀಟ್ ಅಗಲ, ಮತ್ತೊಂದು ೧೩ ಫೀಟ್ ಉದ್ದ ೧೧ ಫೀಟ್ ಅಗಲವಾಗಿದೆ; ಈ ಯೆರಡರಲ್ಲಿ ಯಾವದು ದೊಡ್ಡದು; ಮತ್ತು ದೊಡ್ಡದಾದದ್ದು ಮತ್ತೊಂದಕ್ಕಿಂತ ಯೆಷ್ಟು ದೊಡ್ಡದು. ಉತ್ತರ: ೧ನೆದು ೨ನೆಕ್ಕಿಂತ ೧ ಚೌಕ ಫೂಟ್ ದೊಡ್ಡದು.

೩. ವೊಂದು ಹೊಲ ೩೦೦ ಫೀಟ್ ಉದ್ದ ೪೫೭ ಫೀಟ್ ಅಗಲವಾಗಿದೆ, ಮತ್ತೊಂದು ೪೮೦ ಫೀಟ್ ಉದ್ದ ೨೮ ಫೀ

ಟ್ ಅಗಲ. ಇದರಲ್ಲಿ ಯಾವದು ದೊಡ್ಡದು; ದೊಡ್ಡದಾದದ್ದು ಯೆಷ್ಟು ಹೆಚ್ಚು. ಉತ್ತರ: ೧ನೆದು ೬೦ ಚೌಕ ಫೀಟ್ ಹೆಚ್ಚು.

೪. ವೊಂದು ಹೊಲ ೩೦ ಪೋಲ್ ೨ ಫಾಟಾಮ್ ೧ ಯಾರ್ಡ್ ೨ ಫೀಟ್ ಉದ್ದ, ೧೪ ಪೋಲ್ ೧ ಯಾರ್ಡ್ ಅಗಲವಾಗೆದೆ. ಆ ಹೊಲ ಯೆಷ್ಟು ದೊಡ್ಡದು. ಉತ್ತರ: ೧೧೯೮೦೮ ಚೌಕ ಫೀಟ್=೨ ಯೇಕರ್ ೩೦ ಗುಂಟೆ ೨ ಗಜ.

೫. ವೊಂದು ಹೊಲ ೨ ಫಾಟಾಮ್ ೫ ಫೀಟ್ ಉದ್ದ ಮತ್ತು ೧ ಫಾ ೪ ಫೀಟ್ ಅಗಲವಾಗೆದೆ; ಅದು ಯೆಷ್ಟು ದೊಡ್ಡದು. ಉತ್ತರ: ೧೭೦ □′=೧೮ ಗಜ ೮′.

೬. ವೊಂದು ಕೋಣೆ ೫೨ ಫೀಟ್ ೭ ಇಂಚ್ ಉದ್ದ ಮತ್ತು ೩೪ ಫೀಟ್ ೪ ಇಂಚ್ ಅಗಲ ಇರುವಾಗ, ಅದರ ನೆಲಕ್ಕೆ ೮ ಫೀಟ್ ೪ ಇಂಚ್ ಉದ್ದ ೧ ಫೀಟ್ ೬ ಇಂಚ್ ಅಗಲವಾದ ಹಲಿಗೆಗಳನ್ನು ಹಾಕಿದರೆ, ಇಡೀ ಕೋಣೆ ಮುಚ್ಚುವದಕ್ಕೆ ಇಂಥಾ ಹಲಿಗೆಗಳು ಯೆಷ್ಟು ಬೇಕು. ಉತ್ತರ: ೧೪೪ $\frac{೭೭೨}{೧೮೦೦}$ ಹಲಿಗೆಗಳು.

೭. ೨೮ ಫೀಟ್ ೬ ಇಂಚ್ ಉದ್ದವಾದ ಪಾರ್ಶ್ವಗಳುಳ್ಳ ಚೌಕದ ಅಳತೆ ಯೇನು. ಉತ್ತರ: ೯೭೪೭□′.

೮. ವೊಂದು ೩೬ ಫೀಟ್ ಉದ್ದವಾದ ಕೋಣೆಗೆ ೭೨೪′

ಚೌಕ ಅಳತೆ ಆಗ ಬೇಕು; ಅದು ಯೆಷ್ಟು ಅಗಲ ಇರ ಬೇಕು. ಉತ್ತರ: ೨೦ $\frac{೪}{೩೭}$ ಫೀಟ್.

೯. ವೊಂದು ಕೋಣೆಗೆ ೩೮೪ ಫೀಟ್ ಚೌಕ ಅಳತೆ ಉಂಟು; ಅದರ ಅಗಲ ೧೬ ಫೀಟ್ ಆದರೆ, ಅದು ಯೆಷ್ಟು ಉದ್ದ ಇರುತ್ತದೆ. ಉತ್ತರ: ೨೪ ಫೀಟ್.

೧೦. ವೊಂದು ೩೭ ಫೀಟ್ ಉದ್ದವಾದ ಗೋಡೆಗೆ ೮೫೧ ಚೌಕ ಫೀಟ್ ಅಳತೆ ಇದ್ದರೆ, ಆ ಗೋಡೆ ಯೆಷ್ಟು ಯೆತ್ತರ ಉಂಟು. ಉತ್ತರ: ೨೩ ಫೀಟ್.

೧೧. ವೊಂದು ಕೋಣೆಯ ನಾಲ್ಕು ಗೋಡೆಗಳಿಗೆ ೯೪೬ ಚೌಕ ಫೀಟ್ ಇರುತ್ತವೆ; ಆ ಗೋಡೆಗಳು ೧೧ ಫೀಟ್ ಯೆತ್ತರವಾಗಿದ್ದರೆ, ಸುತ್ತು ಯೆಷ್ಟು ಉದ್ದವಾಗಿದೆ. ಉತ್ತರ: ೮೬ ಫೀಟ್.

೧೨. ವೊಂದು ಸ್ಥಳದಲ್ಲಿ ೨೪೦ ಮರಗಳು ಇರುತ್ತವೆ; ವೊಂದು ಸಾಲಿನಲ್ಲಿ ೪೮ ಮರಗಳು ಇದ್ದರೆ, ಯೆಷ್ಟು ಸಾಲುಗಳು ಇರುತ್ತವೆ. ಉತ್ತರ: ೫ ಸಾಲು.

೧೩. ೨೧೧೨ ಹೆಂಚುಗಳುಳ್ಳ ಮಾಡು ಉಂಟು; ವೊಂದು ಸಾಲಿನಲ್ಲಿ ೨೪ ಹೆಂಚುಗಳು ಇದ್ದರೆ ಯೆಷ್ಟು ಸಾಲು ಆಗುತ್ತವೆ. ಉತ್ತರ: ೮೮ ಸಾಲು.

೧೪. ೧೮೩ ಚೌಕ ಫೀಟ್ ೩೦ ಚೌಕ ಇಂಚ್ ದೊಡ್ಡದಾ

ದ ಸ್ಥಳ ೭ ಫೀಟ್ ೮ ಇಂಚ್ ಅಗಲ ಇದ್ದರೆ, ಅದರ ಉದ್ದ ಯೇನು. ಉತ್ತರ: ೨೩' ೧೦ ೭೦/೯೨″.

೧೫. ವಾಂದು ಗ್ಯಾಡೆ ೨೦ ಫೀಟ್ ಉದ್ದ ೨ ಫೀಟ್ ಅಗಲ ೧೦ ಫೀಟ್ ಯೆತ್ತರ ಇದ್ದರೆ ಅದಕ್ಕೆ ಯೆಷ್ಟು ಸಲೆ ಫೀಟ್ ಉಂಟು. ಉತ್ತರ: ೪೦೦ ಸಲೆ ಫೀಟ್.

೧೬. ವಾಂದು ಕಣಿಮೆ ೩೬೦ ಫೀಟ್ ಉದ್ದ ೫ ಫೀಟ್ ಅಗಲ ೩ ಫೀಟ್ ಆಳವಾಗ ಬೇಕು; ಅದರಿಂದ ಯೆಷ್ಟು ಸಲೆ ಫೀಟ್ ಮಂಣು ತೆಗೆಯ ಬೇಕು. ಉತ್ತರ: ೫೪೦೦ ಸಲೆ ಫೀಟ್.

೧೭. ವಾಂದು ಕ್ಯಾಣೆ ೩೨ ಫೀಟ್ ೪ ಇಂಚ್ ಉದ್ದ ೨೪ ಫೀಟ್ ಅಗಲ ೧೪ ಫೀಟ್ ೮ ಇಂಚ್ ಯೆತ್ತರ ಉಂಟು; ಅದರಾಳಗೆ ಯೆಷ್ಟು ಸಲೆ ಫೀಟ್ ಇರುತ್ತವೆ. ಉತ್ತರ: ೧೧೦೦೬' ೫೭೬″ ಘನ ಅಳತೆ.

೧೮. ವಾಂದು ಕಲ್ಲು ೩ ಫೀಟ್ ೭ ಇಂಚ್ ಉದ್ದ ೨ ಫೀಟ್ ೫ ಇಂಚ್ ಅಗಲ ೨ ಫೀಟ್ ೧ ಇಂಚ್ ಯೆತ್ತರ ಉಂಟು; ಅದರ ವಾಟ್ಟಳತೆ ಯೆಷ್ಟು. ಉತ್ತರ: ೨೮ ಫೀಟ್ ೭೧ ಇಂಚ್ ಘನ ಅಳತೆ.

೧೯. ವಾಂದು ಗ್ಯಾಡೆಗೆ ೩೮೪ ಸಲೆ ಫೀಟ್ ಉಂಟು,

ಮತ್ತು ಆ ಗ್ಯಾಡೆ ೮ ಫೀಟ್ ಯೆತ್ತರ, ೬ ಫೀಟ್ ಅಗಲವಾಗೆದೆ; ಅದರ ಉದ್ದ ಯೆಷ್ಟು. ಉತ್ತರ: ೮ ಫೀಟ್.

೨೦. ವೊಂದು ಗ್ಯಾಡೆ ೯೭೨ ಸಲೆ ಫೀಟ್ ದೊಡ್ಡದಾಗೆದೆ; ಅದರ ಉದ್ದ ೩೬ ಫೀಟ್ ಅಗಲ ೩ ಫೀಟ್ ಇದ್ದರೆ, ಅದು ಯೆಷ್ಟು ಯೆತ್ತರ. ಉತ್ತರ: ೯ ಫೀಟ್.

೨೧. ವೊಂದು ಗ್ಯಾಡೆಗೆ ೧೪೮೫ ಫೀಟ್ ಘನ ಅಳತೆ, ೪೫ ಫೀಟ್ ಉದ್ದ ಮತ್ತು ೧೧ ಫೀಟ್ ಯೆತ್ತರ ಉಂಟು; ಅದರ ಅಗಲ ಯೇನು. ಉತ್ತರ: ೩ ಫೀಟ್.

ಹಣ ತೂಕ ಅಳತೆಗಳ ಕೋಷ್ಟಕ.

೧. ಹಣ ಪಟ್ಟಿ.

೧. ಮುಂಚೆ ರೂಢಿ ಇದ್ದ ಯೆಣಿಕೆ.

೨ ಕಾಣಿ. ೧ ಅರವೀಸ.
೪ „ ೨ „ ೧ ವೀಸೆ.
೮ „ ೪ „ ೨ „ ೧ ಬೇಳೆ.
೧೬ „ ೮ „ ೪ „ ೨ „ ೧ ಹಾಗ.
೩೨ „ ೧೬ „ ೮ „ ೪ „ ೨ „ ೧ ಅಡ್ಡ.
೬೪ „ ೩೨ „ ೧೬ „ ೮ „ ೪ „ ೨ „ ೧ ಹಣ.
೩೨೦ „ ೧೬೦ „ ೮೦ „ ೪೦ „ ೨೦ „ ೧೦ „ ೫ „ ೧ ಹೊನ್ನು.
೬೪೦ „ ೩೨೦ „ ೧೬೦ „ ೮೦ „ ೪೦ „ ೨೦ „ ೧೦ „ ೨ „ ೧ ವರಹ.

೨. ಮುಂಚೆ ನಡೆದ ಹಣ.

ಕಾಸು.
೨ ೧ ರುಪ್ಪಿ.
೪ ೨ „ ೧ ದುಗ್ಗಾಣಿ.
೮ ೪ „ ೨ „ ೧ ದುಡ್ಡು.
೯೬ ೪೮ „ ೨೪ „ ೧೨ „ ೧ ಹಾವಲಿ.
೩೮೪ ೧೯೨ „ ೯೬ „ ೪೮ „ ೪ „ ೧ ರೂಪಾಯಿ.
೧೫೩೬ ೭೬೮ „ ೩೮೪ „ ೧೯೨ „ ೧೬ „ ೪ „ ೧ ವರಹ.

೩. ಈಗ ನಡೆಯುವ ಹಣ.

ಪೈ.
೧೨ ೧ ಆಣೆ.
೧೯೨ ೧೬ „ ೧ ರೂಪಾಯಿ.
೭೬೮ ೬೪ „ ೪ „ ೧ ವರಹ.

೪. ಇಂಗ್ಲಿಷ್ ಹಣ.

ಫಾರ್ಥಿಂಗ್. (f)				
೪	೧ ಪೆನ್ನಿ. (d)			
೪೮	೧೨ „	೧ ಶಿಲ್ಲಿಂಗ್. (s)		
೯೬೦	೨೪೦ „	೨೦ „	೧ ಪೌಂಡ್.	

೨. ತೂಕಗಳು.

೧. ಚಿನ್ನ ಬೆಳ್ಳಿಗಳ ತೂಕ.

ವೀಸ.				
೪	೧ ಹಾಗ.			
೮	೨ „	೧ ಅಡ್ಡ.		
೧೬	೪ „	೨ „	೧ ಹಣ.	
೧೪೪	೩೬ „	೧೮ „	೯ „	೧ ವರಹ.

೩ ವರಹ ೩ ಹಣತೂಕ ಅಂದರೆ—೧ ರೂಪಾಯಿ.

೨. ಸಾಧಾರಣ ತೂಕ.

ವರಹತೂಕ.					
೮೦	೧ ಸೇರು.				
೪೮೦	೬ „	೧ ಪಂಚಸೇರು.			
೯೬೦	೧೨ „	೨ „	೧ ಧಡೆ.		
೩೮೪೦	೪೮ „	೮ „	೪ „	೧ ಮಣ.	
೭೬೮೦೦	೯೬೦ „	೧೬೦ „	೮೦ „	೨೦ „	೧ ಖಂಡಿ.

೩. ಭಾರವಾದ ಜಿನಸುಗಳ ತೂಕ.

ರೂಪೈತೂಕ.			
೨೪	೧ ಸೇರು.		
೧೧೨೦	೪೬ ೨/೩ „	೧ ಮಣ.	
೨೨೪೦೦	೯೩೩ ೧/೩ „	೨೦ „	೧ ಖಂಡಿ.

೪. ಬೆಲ್ಲದ ತೂಕ.

ರೂಪಾಯಿ ತೂಕ.
೨೪ ೧ ಸೇರು.
೯೬೦ ೪೦ „ ೧ ಮಣ.
೧೯೨೦೦ ೮೦೦ „ ೨೦ „ ೧ ಖಂಡಿ.

೫. ಇಂಗ್ಲಿಷ್ ತೂಕ.

ರೂಪಾಯಿ ತೂಕ.
೪೦ ೧ ರಾತಲು.
೧೧೨೦ ೨೮ „ ೧ ಮಣ.
೨೨೪೦೦ ೫೬೦ „ ೨೦ „ ೧ ಟನ್ ಯಾನೆ ಖಂಡಿ.

೩. ಅಳತೆಗಳು.

೧. ಅಕ್ಕಿ ಅಳತೆ.

ರೂಪಾಯಿ ತೂಕ.
೭೮ ೧ ಸೇರು.
೧೦೯೨ ೧೪ „ ೧ ಕಳಸೆ.
೩೨೭೬ ೪೨ „ ೩ „ ೧ ಮುಡಿ.
೧೩೭೫೯೨ ೧೭೬೪ „ ೧೨೬ „ ೪೨ „ ೧ ಕಾಃಜೀಃ.

೨. ಕುಮಟೆಯ ಧಾನ್ಯ ಅಳತೆ.

ರೂಪಾಯಿ ತೂಕ.
೨೪ ೧ ಸೇರು.
೧೧೫೨ ೪೮ „ ೧ ಮಣ.
೨೩೦೪೦ ೯೬೦ „ ೨೦ „ ೧ ಖಂಡಿ.

೩. ತೆಳು ಜೀನಸಿನ ಅಳತೆ.

ರೂಪಾಯಿ ತೂಕ.					
೧೨	೧ ಕುಡುತೆ.				
೨೪	೨ ,,	೧ ಸೇರು.			
೧೧೨	೯ ೧/೩ ,,	೪ ೨/೩ ,,	೧ ಕುತ್ತಿ.		
೪೪೮	೩೭ ೧/೩ ,,	೧೮ ೨/೩ ,,	೪ ,,	೧ ಕಳಾಡ.	
೧೧೨೦	೯೩ ೧/೩ ,,	೪೬ ೨/೩ ,,	೧೦ ,,	೨॥ ,,	೧ ಮಣ.
೧೧೨೦೦	೯೩೩ ೧/೩ ,,	೪೬೬ ೨/೩ ,,	೧೦೦ ,,	೨೫ ,,	೧೦ ,, ೧ ಖಂಡಿ.

೪. ಉಪ್ಪಿನ ಅಳತೆ.

ಮಂಗಳೂರಲ್ಲಿ ನಡೆಯುವಂಥಾದ್ದು.

ರೂಪಾಯಿ ತೂಕ.				
೧೫	೧ ಅಳಕ.			
೧೨೦	೮ ,,	೧ ಪಡಿ.		
೯೬೦	೬೪ ,,	೮ ,,	೧ ಮರಕಾಲು.	
೩೮೪೦೦೦	೨೫೬೦೦ ,,	೩೨೦೦ ,,	೨೦೦ ,,	೧ ಗಾರಸು.

ಸರಕಾರ ಕೋಠಿಗಳಲ್ಲಿ ಉಪ್ಪು ಮಾರುವ ರೀತಿ ಇದೇ. ಆದರೆ ಅಂಗಡಿಗಳಲ್ಲಿ ಉಪ್ಪಂನು ಸೇರಿನ ಪ್ರಕಾರ ಮಾರುತ್ತಾರೆ.

ಮುಂಬಾಯಲ್ಲಿ ನಡೆಯುವಂಥಾದ್ದು.

ರೂಪಾಯಿ ತೂಕ.			
೮೦	೧ ಸೇರು.		
೩೨೦೦	೪೦ ,,	೧ ಮಣ.	
೩೮೪೦೦೦	೪೮೦೦ ,,	೧೨೦ ,,	೧ ಗಾರಸು.

೫. ಮರಗಳ ಅಳತೆ.

ವೀಸ.		
೧೬	೧ ಅಂಗುಲ.	
೩೮೪	೨೪ ,,	೧ ಗಜ ಯಾನೆ ಕೋಲು.

ಕಟ್ಟಿಗೆಯ ಖಂಡಿ ಅಂದರೆ—೨೪ ಕೋಲು ಉದ್ದವೂ, ೧೨ ಅಂಗುಲ ಅಗಲವೂ, ೧ ಅಂಗುಲ

ದಪ್ಪವೂ ಆಗಿರುವಂಥಾದ್ದು. ಆದರೆ ಬೇರೆ ಶೀಮೆಗಳಲ್ಲಿ ಖಂಡಿ ಯೆರಡಷ್ಟು ದೊಡ್ಡದಾಗಿ, ಉದ್ದವಲ್ಲಿಯೂ ಅಗಲದಲ್ಲಿಯೂ ದಪ್ಪದಲ್ಲಿಯೂ ವೊಂದು ಕೋಲಿನ ಪ್ರಮಾಣವುಳ್ಳದ್ದಾಗಿದೆ.

ಕಡೆದ ಮರಗಳಂನು ಕೋಡಿಯ ಪ್ರಕಾರ ಮಾರುವ ಪದ್ಧತಿ ಉಂಟು.

ವೊಂದು ಕೋಡಿ ಅಂದರೆ—೨೪೦ ಗಜ ಉದ್ದವೂ
೧೨ ಅಂಗುಲ ಅಗಲವೂ
೨ ಅಂಗುಲ ದಪ್ಪವೂ ಇರುವಂಥಾದ್ದು.

ಗರಗಸದವರಿಗೆ ೨೪೦ ಗಜ ಉದ್ದವೂ ೧೨ ಅಂಗುಲ ಅಗಲವೂ ಆಗಿರುವ ಕೋಡಿಯ ಪ್ರಕಾರ ಕೂಲಿ ಸಲ್ಲುತ್ತದೆ.

೬. ಉದ್ದದ ಅಳತೆ.

ಇಂಚ್‌ಗಳು.(//)							
೧೨	೧ ಫೂಟ್.(/)						
೩೬	೩ ,,	೧ ಯಾರ್ಡ್.					
೭೨	೬ ,,	೨ ,,	೧ ಫಟಾವ್.				
೧೯೮	೧೬ ೧/೨ ,,	೫ ೧/೨ ,,	೨ ೩/೪ ,,	೧ ಪೋಲ್.			
೭೯೨೦	೬೬೦ ,,	೨೨೦ ,,	೧೧೦ ,,	೪೦ ,,	ಪೋಲೋಂಗ್‌.		
೬೩೩೬೦	೫೨೮೦ ,,	೧೭೬೦ ,,	೮೮೦ ,,	೩೨೦ ,,	೮ ,,	೧ ಮೈಲ್.	

೭. ಚಚೌಕಳತೆ.

ಇಂಚ್‌ಗಳು.					
೧೪೪	೧ ಫೂಟ್.				
೧೨೯೬	೯ ,,	೧ ಗಜ.			
೬೮೦೧	೬೮ ೧/೧೬ ,,	೭ ೯/೧೬ ,,	೧ ಆಣೆ.		
೧೫೬೮೧೬	೧೦೮೯ ,,	೧೨೧ ,,	೧೬ ,,	೧ ಗುಂಟೆ.	
೬೨೭೨೬೪೦	೪೩೫೬೦ ,,	೪೮೪೦ ,,	೬೪೦ ,,	೪೦ ,,	೧ ಯೆಕ್ಕರೆ

೬೪೦ ಯೆಕ್ಕರೆಗಳು ಅಂದರೆ—೧ ಚಚೌಕ ಮೈಲ್.

೮. ಚಕ್ರದ ಅಳತೆ.

ಸೆಕಾಂಡ.				
೬೦	೧ ಮಿನಿಟ.			
೩೬೦	೬೦ ,,	೧ ಡಿಗ್ರೀ.		
೩೨೪೦೦	೫೪೦೭ ,,	೯೦ ,,	೧ ಕ್ವಾಡ್ರಂಟ್.	
೧೨೯೬೦೦	೨೧೬೦೦ ,,	೩೬೦ ,,	೪ ,,	೧ ಮಂಡಲ.

೮. ಕಾಲಪ್ರಮಾಣ.

೧. ಹಿಂದು ರೀತಿ.	೨. ಇಂಗ್ಲಿಷ್ ರೀತಿ.
೧ ವರುಷಕ್ಕೆ = ೧೨ ತಿಂಗಳು.	೧ ವರುಷಕ್ಕೆ = ೧೨ ತಿಂಗಳು, = ೫೨ ವಾರ = ೩೬೫ ದಿವಸ.
೧ ತಿಂಗಳಿಗೆ = ೩೦ ದಿವಸ.	೧ ದಿವಸಕ್ಕೆ = ೨೪ ತಾಸು.
೧ ದಿವಸಕ್ಕೆ = ೮ ಝಾಮು.	೧ ತಾಸಿಗೆ = ೬೦ ಮಿನಿಟು.
೧ ಝಾಮಕ್ಕೆ = ೭॥ ಘಳಿಗೆ.	೧ ಮಿನಿಟಿಗೆ= ೬೦ ಸೆಕೊಂಡ.
೧ ಘಳಿಗೆಗೆ = ೬೦ ವಿಘಳಿಗೆ.	

ಕೆಲವು ತಿಂಗಳಿಗೆ ೩೦, ಕೆಲವು ೩೧ ದಿವಸ ಉಂಟು; ೧ ತಿಂಗಳಿಗೆ ೪ ವಾರ ಲೆಖ್ಖಿಯುತ್ತಾರೆ. ೧ ವಾರಕ್ಕೆ ೭ ದಿವಸ ಉಂಟು.

೪. ಮೈಸೂರಲ್ಲಿ.

೧. ತೂಕ.

೧ ಮಣ = ೪ ಧಡಿಯ.
೧ ಧಡಿಯ = ೨ ಪಂಛೇರು.
೧ ಪಂಛೇರು = ೨ ಅಡಿಸೇರು.
೧ ಅಡಿಸೇರು. = ೨ ಸವಾಸೇರು.
೧ ಸವಾಸೇರು. = ೧ ೧/೪ ಸೇರು.
೧ ಸೇರು = ೪ ಪಾವು.
೧ ಪಾವು = ೨ ಅರೆಪಾವು.

ತೆಳುಜಿನಸಿನ ಅಳತೆ ಅದೆ.

೨. ಧಾನ್ಯದ ಅಳತೆ.

ಮುಂಚಿನದು.	ಈಗಿನದು.
೧ ಖಂಡುಗ = ೪ ಪಂಚಕ.	೧ ಪಲ್ಲ = ೧೦೦ ಶೇರು.
೧ ಪಂಚಕ = ೫ ಕೊಳಗ.	೧ ಶೇರು = ೨ ಅಛೇರು.
೧ ಕೊಳಗ = ೪ ಬಳ್ಳ.	೧ ಅಛೇರು = ೨ ಪಾವು.
೧ ಬಳ್ಳ = ೪ ಮಾನ.	೧ ಪಾವು = ೨ ಅರೆಪಾವು.
೧ ಮಾನ = ೪ ಸೊಲಿಗೆ.	೧ ಅರೆಪಾವು = ೨ ಚಟಾಕು.
೧ ಸೊಲಿಗೆ = ೪ ಗಿದ.	

ಸಂವತ್ಸರಗಳ ಹೆಸರು.

ಪ್ರಭವ.	ಸರ್ವಜಿತು ೧೮೨೮.	ಪ್ಲವಂಗ.
ವಿಭವ.	ಸರ್ವಧಾರಿ.	ಕೀಲಕ.
ಶುಕ್ಲ.	ವಿರೋಧಿ.	ಸೌಮ್ಯ.
ಪ್ರಮೋದೂತ.	ವಿಕೃತಿ.	ಸಾಧಾರಣ.
ಪ್ರಜೋತ್ಪತ್ತಿ.	ಖರ.	ವಿರೋಧಿಕೃತು.
ಆಂಗೀರಸ.	ನಂದನ.	ಪರಿಧಾವಿ.
ಶ್ರೀಮುಖ.	ವಿಜಯ.	ಪ್ರಮಾದಿಚ ೧೮೫೪.
ಭಾವ	ಜಯ.	ಆನಂದ ೧೮೫೫
ಯುವ.	ಮನ್ಮಥ.	ರಾಕ್ಷಸ.
ಧಾತು.	ದುರ್ಮುಖಿ.	ನಳ
ಈಶ್ವರ.	ಹೇವಿಳಂಬಿ.	ಪಿಂಗಳ.
ಬಹುಧಾನ್ಯ.	ವಿಳಂಬಿ.	ಕಾಳಯುಕ್ತಿ
ಪ್ರಮಾದಿ.	ವಿಕಾರಿ.	ಸಿದ್ಧಾರ್ಥಿ.
ವಿಕ್ರಮ.	ಶಾರ್ವರಿ ೧೮೪೧.	ರೌದ್ರಿ.
ವಿಷು.	ಪ್ಲವ.	ದುರ್ಮತಿ.
ಚಿತ್ರಭಾನು.	ಶುಭಕೃತು.	ದುಂದುಭಿ.
ಸ್ವಭಾನು.	ಶೋಭಕೃತು.	ರುಧಿರೋದ್ಗಾರಿ.
ತಾರಣ.	ಕ್ರೋಧಿ.	ರಕ್ತಾಕ್ಷಿ.
ಪಾರ್ಥಿವ.	ವಿಶ್ವಾವಸು.	ಕ್ರೋಧನ.
ವ್ಯಯ.	ಪರಾಭವ.	ಕ್ಷಯ ೧೮೬೭.

ತಿಂಗಳುಗಳ ಹೆಸರು.

ಶುಕ್ಲ ಪಕ್ಷ.				ಕೃಷ್ಣ ಪಕ್ಷ.	
ಚೈತ್ರ	ಮಾರ್ಚ್. ಯೆಪ್ರೆಲ್.	ಶ್ರಾವಣ	ಜೂಲೈ. ಅಗಾಸ್ತ.	ಮಾರ್ಗಶಿರ	ನವಂಬರ್. ದಸಂಬರ್.
ವೈಶಾಖ	ಯೆಪ್ರೆಲ್. ಮೇ.	ಭಾದ್ರಪದ	ಅಗಾಸ್ತ. ಸೆಪ್ಟೆಂಬರ್.	ಪುಷ್ಯ	ದಸಂಬರ್. ಜನವರಿ.
ಜ್ಯೇಷ್ಠ	ಮೇ. ಜೂನ್.	ಆಶ್ವೀಜ	ಸೆಪ್ಟೆಂಬರ್. ಅಕ್ಟೋಬರ್.	ಮಾಘ	ಜನವರಿ. ಫೆಬ್ರುವರಿ.
ಆಷಾಢ	ಜೂನ್. ಜೂಲೈ.	ಕಾರ್ತೀಕ	ಅಕ್ಟೋಬರ್. ನವೆಂಬರ್.	ಫಾಲ್ಗುಣ	ಫೆಬ್ರುವರಿ. ಮಾರ್ಚ್.

ಹಿಂದೂ ತಿಂಗಳುಗಳು, ಕ್ರೈಸ್ತತಿಂಗಳಿನ ಮಧ್ಯದಲ್ಲಿ ಆರಂಭವಾಗುತ್ತವೆ.

ಪಕ್ಷದ ದಿವಸಗಳ ಹೆಸರು.

ಶುಕ್ಲ ಪಕ್ಷ.			ಕೃಷ್ಣ ಪಕ್ಷ.		
೧	ಶುದ್ಧ	ಪಾಡ್ಯ.	೧	ಬಹುಳ	ಪಾಡ್ಯ.
೨	"	ಬಿದಿಗೆ.	೨	"	ಬಿದಿಗೆ.
೩	"	ತದಿಗೆ.	೩	"	ತದಿಗೆ.
೪	"	ಚೌತಿ.	೪	"	ಚೌತಿ.
೫	"	ಪಂಚಮಿ.	೫	"	ಪಂಚಮಿ.
೬	"	ಷಷ್ಟಿ.	೬	"	ಷಷ್ಟಿ.
೭	"	ಸಪ್ತಮಿ.	೭	"	ಸಪ್ತಮಿ.
೮	"	ಅಷ್ಟಮಿ.	೮	"	ಅಷ್ಟಮಿ.

	ಶುಕ್ಲ ಪಕ್ಷ.		ಕ್ರಿಷ್ಣ ಪಕ್ಷ.
೯	ಶುದ್ಧ ನವಮಿ.	೯	ಬಹುಳ ನವಮಿ.
೧೦	" ದಶಮಿ.	೧೦	" ದಶಮಿ.
೧೧	" ಯೇಕದಶಿ.	೧೧	" ಯೇಕದಶಿ.
೧೨	" ದ್ವಾದಶಿ.	೧೨	" ದ್ವಾದಶಿ.
೧೩	" ತ್ರಯೋದಶಿ.	೧೩	" ತ್ರಯೋದಶಿ.
೧೪	" ಚತುರ್ದಶಿ.	೧೪	" ಚತುರ್ದಶಿ.
೧೫	" ಪೂರ್ಣಿಮೆ.	೧೫	" ಅಮವಾಶೆ.

3,50

ಗಣಿತ ವಿದ್ಯೆ

ಮೊದಲನೆ ಭಾಗ.

ಶುದ್ಧ ಸಂಖ್ಯೆ ಮಿಶ್ರ ಸಂಖ್ಯೆಗಳ

ಪರಿಕರ್ಮ ಚತುಷ್ಟಯ.

ಇದಕ್ಕೆ ತಾಗಿ ಘಟ್ಟದ ಮೇಲೆಯೂ ಕೆಳಗೆಯೂ ವ್ಯಾಪಾರಕ್ಕೆ ತಕ್ಕ ಹಣ ತೂಕ ಅ

ಸಂವತ್ಸರ ತಿಂಗಳು ದಿವಸಗಳ ಪರಿಭಾಷೆ ಸಹಿತ ಹೇಳಿಯದೆ.

ಮಂಗಳೂರು: